# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಫೆಬ್ರವರಿ-2016
ಬೆಲೆ ರೂ. 1






ಸಂಘದ ಐತಿಹಾಸಿಕ ಪಿಕ್‌ನಿಕ್

## ದೆಹಲಿಯಲ್ಲಿ ಕರ್ನಾಟಕದ ಕಾಫಿ

# ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 5
ಫೆಬ್ರವರಿ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ಭಾರತದ 66ನೇ ಗಣರಾಜ್ಯೋತ್ಸವವನ್ನು ಜನವರಿ 26ರಂದು ದೇಶವಿಡೀ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ದೆಹಲಿಯ ಮಟ್ಟಿಗೆ ಗಣರಾಜ್ಯೋತ್ಸವ ಎಲ್ಲರಿಗೂ ನಿಜವಾದ ಹಬ್ಬ ಮತ್ತು ಹೆಮ್ಮೆಯ ದಿನವಾಗಿರುತ್ತದೆ. ತಿಂಗಳುಗಟ್ಟಲೇ ಮೊದಲು ನವದೆಹಲಿಯ ರಾಜಪಥದಲ್ಲಿ ನಡೆಯುವ ಸಿದ್ಧತೆಗಳು, ಪೆರೇಡ್‌ನ ರಿಹರ್ಸಲ್‌ಗಳು, ವಿವಿಧ ರಾಜ್ಯಗಳಿಂದ ಮತ್ತು ಸರ್ಕಾರದ ಇಲಾಖೆಗಳಿಂದ ತಯಾರಾಗುವ ಟ್ಯಾಬ್ಲೋಗಳು, ಪಥ ಸಂಚಲನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ತಯಾರಿ, ಪದ್ಮ ಪ್ರಶಸ್ತಿಗಳ ಘೋಷಣೆಗೆ ಕಾಯುವವರು, ಹೀಗೆ ದೆಹಲಿಯು ತಿಂಗಳಿಡೀ ಸಂಭ್ರಮಿಸುತ್ತದೆ. ಈ ಸಲದ ಗಣರಾಜ್ಯೋತ್ಸವದ ಪೆರೇಡ್‌ನಲ್ಲಿ ಕರ್ನಾಟಕದ ಹೆಮ್ಮೆಯ ಉತ್ಪನ್ನವಾದ ಕಾಫಿಯ ಪರಿಮಳವನ್ನು ನವದೆಹಲಿಯ ರಾಜಪಥದಲ್ಲಿ ಬೀರಿಸಿದ ನಯನ ಮನೋಹರವಾದ ಕರ್ನಾಟಕದ ಟ್ಯಾಬ್ಲೋ ಎಲ್ಲರ ಪ್ರಶಂಸೆಯನ್ನು ಗಳಿಸಿತು. ಕರ್ನಾಟಕ ಸರ್ಕಾರದ ಅಧಿಕಾರಿಗಳು, ಟ್ಯಾಬ್ಲೋ ತಯಾರಿಯಲ್ಲಿ ಪಾಲ್ಗೊಂಡ ಕಲಾವಿದರು ಮತ್ತು ಕುಶಲಕರ್ಮಿಗಳಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ 299 ಸದಸ್ಯರ ಸಂವಿಧಾನ ರಚನಾ ಮಂಡಳಿಯು ತಯಾರಿಸಿದ ಭಾರತದ ಸಂವಿಧಾನವು ಅನುಷ್ಠಾನಗೊಂಡ ನಂತರ ಭಾರತವು 1950ರ ಜನವರಿ 26ರಂದು ಒಂದು ಸಂವಿಧಾನಾತ್ಮಕ ರಾಷ್ಟ್ರವಾಯಿತು. ವಿಶ್ವದ ಅತ್ಯಂತ ಬೃಹತ್ ಸಂವಿಧಾನವಾದ ಭಾರತದ ಸಂವಿಧಾನದಲ್ಲಿ ಜಗತ್ತಿನ ಬೃಹತ್ ಪ್ರಜಾಸತ್ತಾತ್ಮಕವಾದ ದೇಶದ ಆಡಳಿತದ ಕುರಿತು ವಿವರಗಳಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು, ಸಾಂವಿಧಾನಿಕ ಸಂಸ್ಥೆಗಳು ಮತ್ತೆ ದೇಶದ ಪ್ರಜೆಗಳು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ವಿವರಿಸಲಾಗಿದೆ.

ಬೆನಗಲ್ ಶಿವರಾವ್ ಸೇರಿದಂತೆ ಕರ್ನಾಟಕದಿಂದ ಬಹಳಷ್ಟು ಮಂದಿ ಸಂವಿಧಾನ ರಚನಾ ಮಂಡಳಿಯಲ್ಲಿದ್ದು ಸಂವಿಧಾನದ ರಚನೆಗೆ ಅಭೂತಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ. ದೇಶದ ಉನ್ನತ ಸ್ಥಾನವಾದ ಪ್ರಧಾನಿಯ ಪಟ್ಟವನ್ನು ಕನ್ನಡಿಗರೊಬ್ಬರು ಅಲಂಕರಿಸಿದ ಹೆಮ್ಮೆ ನಮ್ಮಲ್ಲಿದ್ದರೆ, ರಾಷ್ಟ್ರಪತಿ ಸ್ಥಾನವನ್ನೂ ಕನ್ನಡಿಗನೊಬ್ಬ ಅಲಂಕರಿಸಬೇಕು ಎಂಬುದು ಕನ್ನಡಿಗರೆಲ್ಲರ ಕನಸಾಗಿ ಆ ನಿಟ್ಟಿನಲ್ಲಿ ರಾಜ್ಯದ ರಾಜಕೀಯ ಧುರೀಣರು ಪಕ್ಷಾತೀತರಾಗಿ ಕಾರ್ಯೋನ್ಮುಖರಾಗಬೇಕು.

ಗಣರಾಜ್ಯೋತ್ಸವ ಸಂದರ್ಭದಲ್ಲಿ ದೆಹಲಿಯ ಪ್ರಜೆಗಳಲ್ಲಿ ಒಂದು ಭಯದ ಛಾಯೆಯೂ ಯಾವಾಗಲೂ ಆವರಿಸಿರುತ್ತದೆ. ದೇಶದ ರಕ್ಷಣಾ ವ್ಯವಸ್ಥೆಯ ಆಧುನಿಕ ಆಯುಧಗಳನ್ನು ಪ್ರದರ್ಶಿಸುವ ಈ ಸಂದರ್ಭದಲ್ಲಿ, ಅಂತಹ ಪ್ರಯತ್ನವನ್ನು ಭಂಗಗೊಳಿಸಲು ದೇಶದ ಹಿತವನ್ನು ಬಯಸದ ಭಯೋತ್ಪಾದಕ ಸಂಘಟನೆಗಳು ಆತಂಕಕಾರಿ ಘಟನೆಗಳು ಸಂಭವಿಸುವಂತೆ ಕಾರ್ಯಪ್ರವೃತ್ತವಾಗುತ್ತವೆ. ಇದರಿಂದ ದೆಹಲಿಯ ರಕ್ಷಣಾ ವ್ಯವಸ್ಥೆಯು ಬಹಳಷ್ಟು ಪೂರ್ವ ತಯಾರಿಯನ್ನು ನಡೆಸಿ ಎಚ್ಚರದಿಂದ ಇರಬೇಕಾಗುತ್ತದೆ.

ದೇಶದ ಸಂವಿಧಾನವನ್ನು ಗೌರವಿಸುವುದು ದೇಶವನ್ನು ಆಳುವವರ ಮಾತ್ರವಲ್ಲ, ದೇಶದ ಪ್ರಜೆಗಳ ಜವಾಬ್ದಾರಿಯೂ ಕೂಡಾ. ದೇಶದ ಆಡಳಿತದ ವಿವಿಧ ಸಮಯಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭಗಳಲ್ಲಿ ಯಾವುದೇ ಗೊಂದಲಗಳು ಎದ್ದರೆ, ಎಲ್ಲರೂ ಸಂವಿಧಾನವೇನು ಹೇಳುತದೆ ಎಂದು ನೋಡುತ್ತಾರೆ. ಇಂತಹ ನಿದರ್ಶನಗಳು ನಾವು ಒಂದು ಸಂಸ್ಥೆಯನ್ನು ನಡೆಸುವಾಗಲೂ ಯಾವ ರೀತಿ ಎಚ್ಚರದಿಂದ ಇರಬೇಕು ಎನ್ನುವುದನ್ನು ಕಲಿಸುತ್ತವೆ. ಸಂಘ ಸಂಸ್ಥೆಗಳ ಆಡಳಿತವನ್ನೂ ನಾವು ಅದರದೇ ಆದ ಸಂವಿಧಾನಗಳಿಗನುಗುಣವಾಗಿ ಮಾಡಿದರೆ ಮಾತ್ರ ನಮ್ಮಲ್ಲಿರುವ ಪ್ರಜಾಪ್ರಭುತ್ವದ ಬುನಾದಿ ಗಟ್ಟಿಯಾಗಬಹುದು. ಸಂವಿಧಾನಬಾಹಿರ ಕೆಲಸಗಳು ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಆಡಳಿತ ಮಂಡಳಿಯಲ್ಲಿರುವಂತೆ ಅಂತಹ ಕೆಲಸಗಳೇನಾದರೂ ಆದರೆ ಸದಸ್ಯರು ಎಚ್ಚರಿಕೆಯ ಗಂಟೆಯ ಮೂಲಕ ಸಂಸ್ಥೆಯ ರಕ್ಷಣೆಯನ್ನು ಮಾಡಬೇಕಾಗುತ್ತದೆ. ದೆಹಲಿ ಕರ್ನಾಟಕ ಸಂಘದಂತಹ ಬಲಿಷ್ಟ ಸಂಘಟನೆಗಳಿಗೆ ಇಂತಹ ಆತಂಕಗಳು ಇರದಿದ್ದರೂ ಗಣರಾಜ್ಯೋತ್ಸವದ ಈ ಸಂದರ್ಭದಲ್ಲಿ ನಾವು ಈ ರೀತಿಯ ಚಿಂತನೆಯನ್ನು ಮಾಡುವುದು ಒಳಿತು ಎಂದನಿಸುತದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. 2016ರ ಗಣರಾಜ್ಯೋತ್ಸವ ದಿನಾಚರಣೆ ಪ್ರದರ್ಶನದಲ್ಲಿ ಕರ್ನಾಟಕದ 'ಕೊಡಗಿನ ಕಾಫಿ' ಸ್ತಬ್ಧಚಿತ್ರ ರೂಪಿಸಿದ ಖ್ಯಾತ ಕಲಾ ನಿರ್ದೇಶಕ ಯಾರು?
2. 'ಅಂಡಯ್ಯ' ಕವಿಯ ಕಾವ್ಯ ಯಾವುದು?
3. 'ಆದಿದೇವ'ನ ಇಬ್ಬರು ಮಕ್ಕಳನ್ನು ಹೆಸರಿಸಿ?
4. ಮಧ್ಯಮ ವ್ಯಾಯೋಗ ನಾಟಕದ ನಿರ್ದೇಶಕರು ಯಾರು?
5. ಹಸ್ತಿನಾಪುರ ಉತ್ತರ ಪ್ರದೇಶದ ಯಾವ ಜಿಲ್ಲೆಯಲ್ಲಿದೆ?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.2.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಜನವರಿ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ** 1. 29.12.1904, "ಶ್ರೀ ರಾಮಾಯಣ ದರ್ಶನಂ" 2. ತಿಮ್ಮಪ್ಪ ನಾಯಕ, ನವೆಂಬರ್ 17, 3. ಪ್ರೊ. ಎಚ್.ಎಸ್. ಶಿವಪ್ರಕಾಶ್, School of Art and Aesthetics, JNU. 4. ತಲ ಕಾವೇರಿ, 5. ಬೆಂಗಳೂರಿನ ಸ್ವರಾಮೃತ ತಂಡ

**ಸರಿಯಾದ ಉತ್ತರ ಕಳುಹಿಸಿದವರು.**

1 ಶ್ರೀ ಭರತ್ ಕುಮಾರ್ ಎನ್.ಎಂ. 2. ಶ್ರೀಮತಿ ಸೌಮ್ಯ ಕೋಟ್ರೇಶ್, 3. ಶ್ರೀಮತಿ ಶಾರದಾ ಮಲ್ಲನಗೌಡ 4. ಶ್ರೀಮತಿ ಪ್ರೇಮಲತಾ.

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ ಒಂದು ಸಿಹಿ ಸುದ್ದಿ. ಈ ಬಾರಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕಳೆದ ಬಾರಿ 20 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದು, ಸಂಘದ ಯಶಸ್ವೀ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡ ಇಲಾಖೆಯು ಈ ಬಾರಿ ಅನುದಾನವನ್ನು ಹೆಚ್ಚಿಸಿದೆ. ಈ ನಿರ್ಧಾರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮಂತ್ರಿಯವರಾದ ಶ್ರೀಮತಿ ಉಮಾಶ್ರೀ ಮತ್ತು ಇಲಾಖೆಯ ನಿರ್ದೇಶಕರಾದ ಶ್ರೀ ದಯಾನಂದ ಅವರಿಗೆ ಹಾಗೂ ಸಹಕರಿಸಿದ ಇಲಾಖೆಯ ಸಿಬ್ಬಂದಿ ವರ್ಗಕ್ಕೆ ನಮ್ಮ ಮನಃಪೂರ್ವಕ ಕೃತಜ್ಞತೆಗಳು.

ಸಂಘದ ಇನ್ನೊಂದು ವಿಶೇಷ ಪ್ರಯತ್ನವೆಂದರೆ ಇತಿಹಾಸದಲ್ಲೇ ನಡೆದಿಲ್ಲದ ಒಂದು ಅದ್ಭುತ ಕಾರ್ಯಕ್ರಮವಾದ ಹಸ್ತಿನಾಪುರಕ್ಕೆ ಪಿಕ್‌ನಿಕ್ ಆಯೋಜನೆ. ಸುಮಾರು 700ಕ್ಕಿಂತಲೂ ಹೆಚ್ಚು ಕನ್ನಡಿಗರು, 15 ಹವಾನಿಯಂತ್ರಿತ ಬಸ್ಸುಗಳಲ್ಲಿ ದೆಹಲಿಯಿಂದ ಹಸ್ತಿನಾಪುರಕ್ಕೆ ಪ್ರವಾಸ ಕೈಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುವ ಶ್ರೇಯಸ್ಸನ್ನು ಪಡೆದಿದ್ದೀರಿ. ಪಿಕ್‌ನಿಕ್ ಉಪಸಮಿತಿಯ ಅಧ್ಯಕ್ಷ ಶ್ರೀ ವಿ.ವಿ. ಬಿರಾದಾರ ಮತ್ತು ಸಂಚಾಲಕ ಶ್ರೀ ರಾಧಾಕೃಷ್ಣ ಹಾಗೂ ಹಗಲಿಗೆ ಹೆಗಲು ಕೊಟ್ಟು ಸಹಕರಿಸಿದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಅಭಿನಂದನಾರ್ಹರು.

ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು ಭಾರಿ ಸ್ಪರ್ಧಾತ್ಮಕ ಹುಮ್ಮಸ್ಸಿನಿಂದ ನಡೆಯುತ್ತಿವೆ. ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ 13 ತಂಡಗಳು ಭಾಗವಹಿಸುತ್ತಿದ್ದು, ಪ್ರತಿಯೊಂದು ತಂಡವು ಉತ್ತಮ ಪ್ರದರ್ಶನ ನೀಡುತ್ತಿವೆ. ಆಟೋಟ ಸ್ಪರ್ಧೆಗಳಲ್ಲಿ ಥ್ರೋಬಾಲ್, ವಾಲಿಬಾಲ್, ಕಬ್ಬಡ್ಡಿ ಮುಂತಾದವುಗಳು ನಡೆಯುತ್ತಿವೆ. ಇವೆಲ್ಲದರ ಉಸ್ತುವಾರಿಯನ್ನು ನೋಡುತ್ತಿರುವ ಕ್ರೀಡಾ ಉಪಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರ ಕೊಡುಗೆ ಅಪಾರ.

ಈಗಾಗಲೇ ಉತ್ತರ ಕರ್ನಾಟಕದ ಎರಡು ಪ್ರಸಿದ್ಧ ನಾಟಕಗಳಾದ ಸತ್ಯಹರಿಶ್ಚಂದ್ರ ಮತ್ತು ಮಲಮಗಳು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಜತೆ ಸೇರಿ ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡಿವೆ. ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಶೇಕ ಮಾಸ್ತರ ಅವರು ಬರುವ ಮಾರ್ಚ್ ತಿಂಗಳಲ್ಲಿ ದೆಹಲಿಯ ಸ್ಥಳೀಯ ಕನ್ನಡ ಕಲಾವಿದರಿಗೆ ಒಂದು ರಂಗ ತರಬೇತಿ ಶಿಬಿರ ನಡೆಸುವ ಭರವಸೆಯನ್ನು ನೀಡಿದ್ದಾರೆ.

ಹಾಗೆಯೇ ಸಂಘವು ಫೆಬ್ರವರಿ 14ರಂದು ಸಂಕಲ್ಪ ಮೈಸೂರು ಮತ್ತು ಕರ್ನಾಟಕ ಕಾರಾಗೃಹ ಇಲಾಖೆ ಅರ್ಪಿಸುವ ಪ್ರೊ. ಎಚ್.ಎಸ್. ಶಿವಪ್ರಕಾಶ್ ವಿರಚಿತ 'ಮಾರನಾಯಕ' ನಾಟಕಕ್ಕೆ ಮತ್ತು ಫೆಬ್ರವರಿ 28ರಂದು ಕೊಡವ ಅಕಾಡೆಮಿಯ ನಡೆಸಲಿರುವ 'ಕೊಡವ ಸಾಂಸ್ಕೃತಿಕ ಉತ್ಸವ'ಕ್ಕೆ ತಾವೆಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮುಂಬರುವ ಮಾರ್ಚ್ 6ರ ಭಾನುವಾರ ಗುರುಗಾಂವ್‌ನಲ್ಲಿ ಮತ್ತು 12 ಮತ್ತು 13ರಂದು ದೆಹಲಿಯಲ್ಲಿ 'ಹೊರನಾಡ ಸಾಂಸ್ಕೃತಿಕ ಉತ್ಸವ' ನಡೆಯಲಿದ್ದು ಸುಮಾರು 100ಕ್ಕಿಂತಲೂ ಹೆಚ್ಚು ಕಲಾವಿದರು ಬಂದು ಕಾರ್ಯಕ್ರಮ ನೀಡಲಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳ ಆಹಾರ ಮೇಳವನ್ನು ಕಾರಣಾಂತರಗಳಿಂದ ಮಾರ್ಚ್ ತಿಂಗಳಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಭಾಗವಹಿಸುವವರು ಯಾವ ಯಾವ ತಿಂಡಿ ತಿನಿಸುಗಳನ್ನು ಮಾಡುತ್ತೀರಿ ಎಂಬುದನ್ನು ಸಂಘದ ಕಛೇರಿಗೆ ತಿಳಿಸಿರಿ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

### 13 ಮತ್ತು 14 ಫೆಬ್ರವರಿ 2016 — ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 9.00ರಿಂದ

ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಫೆಬ್ರವರಿ ತಿಂಗಳಿನಲ್ಲಿ ಜೆ.ಎನ್.ಯು.ವಿನ ಹಳೇ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

### 14 ಫೆಬ್ರವರಿ 2016 — ಭಾನುವಾರ, ಸಂಜೆ 6.00 ಗಂಟೆಗೆ

ಸಂಕಲ್ಪ ಮೈಸೂರು ಮತ್ತು ಕರ್ನಾಟಕ ಕಾರಾಗೃಹ ಇಲಾಖೆ ಅರ್ಪಿಸುವ ಕಾರಾಗೃಹ ನಿವಾಸಿಗಳು ಅಭಿನಯಿಸುವ ಪ್ರೊ. ಎಚ್.ಎಸ್. ಶಿವಪ್ರಕಾಶ್ ವಿರಚಿತ, ಉಲುಗಪ್ಪ ಕಟ್ಟೀಮನಿ ನಿರ್ದೇಶನದ

**ನಾಟಕ : ಮಾರನಾಯಕ**

ಇದೇ ಸಂದರ್ಭದಲ್ಲಿ ಪಿ. ಶೇಷಾದ್ರಿ ನಿರ್ದೇಶನದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಗುವುದು

### 28 ಫೆಬ್ರವರಿ 2016 — ಭಾನುವಾರ, ಬೆಳಿಗ್ಗೆ 10.00 ರಿಂದ

ಕೊಡವ ಅಕಾಡೆಮಿಯಿಂದ
ಕೊಡವ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮಗಳು

### 6 ಮಾರ್ಚ್ 2016 — ಭಾನುವಾರ, ಬೆಳಿಗ್ಗೆ 10.00ರಿಂದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ದೆಹಲಿ ಕರ್ನಾಟಕ ಸಂಘ ಮತ್ತು ಗುರುಗಾಂವ್ ಕನ್ನಡ ಸಂಘದ ಸಹಯೋಗದೊಂದಿಗೆ – ಹೊರನಾಡ ಸಾಂಸ್ಕೃತಿಕ ಉತ್ಸವ
ಸ್ಥಳ : ಗುರುಗಾಂವ್, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ–9911156695

### 12 ಮತ್ತು 13 ಮಾರ್ಚ್ 2016 — ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 10.00ರಿಂದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಹೊರನಾಡ ಸಾಂಸ್ಕೃತಿಕ ಉತ್ಸವ

### 20 ಮಾರ್ಚ್ 2016 — ಭಾನುವಾರ, ಬೆಳಿಗ್ಗೆ 11.00ರಿಂದ

ಫುಡ್ ಫೆಸ್ಟಿವಲ್ (ಆಹಾರ ಮೇಳ) ಬೊಂಬೆ ಕುಣಿತ ಮತ್ತು ತಮಟೆ ವಾದನ

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

### 13 ಫೆಬ್ರವರಿ 2016 — ಶನಿವಾರ, ಸಂಜೆ 4.30 ಗಂಟೆಗೆ

ಸ್ವರಾಂಜಲಿ ಪ್ರಸ್ತುತಪಡಿಸುವ ಹಾಸ್ಯ ಸಂಜೆ ಕೋಗಿಲಿ ಕೊಟ್ರೇಶ್ ಅವರಿಂದ ಮತ್ತು ಸ್ವರಾಂಜಲಿ ಕಲಾವಿದರಿಂದ ಚಲನಚಿತ್ರ ಗೀತೆಗಳು

### 21 ಫೆಬ್ರವರಿ 2016 — ಭಾನುವಾರ, ಸಂಜೆ 5.00 ಗಂಟೆಗೆ

ದೆಹಲಿ ಮಿತ್ರ ನವದೆಹಲಿ, ಸಹಯೋಗದಲ್ಲಿ 'ಬಲ್ಲಿರೇನಯ್ಯ' ಯಕ್ಷಗಾನ ಮಾಸಪತ್ರಿಕೆಯ ಬಿಡುಗಡೆ, ಅಳಿಕೆಃ ಸ್ಮೃತಿ–ಕೃತಿ ಮತ್ತು ತಾಳಮದ್ದಲೆ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818




ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 5
ಫೆಬ್ರವರಿ 2016

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

ಆರನೇ ಪುಟದ ಚಿತ್ರ
ಅಂತರ್ಜಾಲದಿಂದ


## ಸಂಪಾದಕೀಯ

# ಶಿಕ್ಷಣ ಕ್ಷೇತ್ರದ ಚಿಂತನೆಗಳು

ಹೊಸ ವರ್ಷದ ಸಡಗರ ಮುಗಿಯುತ್ತಿದ್ದಂತೆ ದೆಹಲಿಯ ಹವಾಮಾನದಲ್ಲಿ ಚಳಿಯ ತೀವ್ರತೆ ಕಡಿಮೆಯಾಗುತ್ತಿದೆ. ಬೆಚ್ಚನೆಯ ಉಡುಪನ್ನು ಧರಿಸಿಕೊಂಡು ಶಾಲೆಗೆ ಹೋಗುವ ಮಕ್ಕಳಿಗೆ ಪರೀಕ್ಷೆಯ ಬಿಸಿ ಹೆಚ್ಚ ತೊಡಗುತಿದೆ. ಪರೀಕ್ಷೆಗಾಗಿ ಅಧ್ಯಯನದಲ್ಲಿ ತೊಡಗುವುದು ಒಂದೆಡೆಯಾದರೆ, ಮುಗಿಯದ ಪಠ್ಯಗಳನ್ನು ಅಧ್ಯಾಪಕರಿಂದ ಹೇಳಿಸಿಕೊಂಡು ಕಲಿಯುವುದು ಇನ್ನೊಂದೆಡೆ ಒತ್ತಡವನ್ನು ತರುತ್ತವೆ. ಜತೆಗೆ ಪಠ್ಯನೀತಿಗಳಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳು ಹೊಸ ತರದಲ್ಲಿ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದನ್ನು ಬಯಸುತ್ತವೆ. ಪ್ರಾಥಮಿಕ ಶಿಕ್ಷಣದಿಂದ ತೊಡಗಿ ಉನ್ನತ ಶಿಕ್ಷಣದ ವರೆಗೆ ವಿವಿಧ ಕಡೆಗಳಿಂದ ದೇಶದೆಲ್ಲೆಡೆ ಸಾಮಾಜಿಕ ಒತ್ತಡಗಳು ಬೀಳುತ್ತಿವೆ. ದೆಹಲಿಯಂತಹ ಮಹಾನಗರಗಳಲ್ಲಿಯೂ ಪ್ರಾಥಮಿಕ ಶಿಕ್ಷಣವನ್ನು ಕುರಿತಂತೆ ಗೊಂದಲಗಳು ಮಕ್ಕಳ ಹೆತ್ತವರನ್ನು ಕಾಡುತ್ತಿವೆ. ಶಿಕ್ಷಣವೆನ್ನುವುದು ಲಾಭಗಳಿಸುವ ಉದ್ಯಮವಾಗಿ ಬೆಳೆಯುವ ಆತಂಕದ ಜತೆಗೆ ಮಕ್ಕಳ ಸಮಗ್ರ ಬೌದ್ಧಿಕ ಬೆಳವಣಿಗೆಯತ್ತ ಯಾವ ರೀತಿ ಕೊಡುಗೆಯನ್ನು ನೀಡುತ್ತದೆ ಮತ್ತು ವಿದ್ಯಾಭ್ಯಾಸದ ಮುಖ್ಯ ಗುರಿ ಜ್ಞಾನಾಭಿವೃದ್ಧಿ ಗೊಳಿಸುವುದೋ ಅಥವಾ ವ್ಯಕ್ತಿಗೆ ಜೀವನ ಕ್ರಮ ಕಲಿಸಿ ಕೌಶಲ್ಯತೆಯ ಮೂಲಕ ಬದುಕಿನ ದಾರಿಯನ್ನು ನೀಡುವುದೋ ಎಂಬ ಗೊಂದಲಗಳಲ್ಲಿ ಚರ್ಚೆಗಳು ಮುಂದುವರಿಯುತ್ತಿವೆ. ಪ್ರಾಥಮಿಕ ಶಿಕ್ಷಣವು ದೇಶದ ಪ್ರತಿಯೊಬ್ಬ ಮಗುವಿನ ಹಕ್ಕು. ಹೆಣ್ಣು-ಗಂಡು, ಬಡವ-ಶ್ರೀಮಂತ, ಹಳ್ಳಿ-ನಗರಗಳೆಂಬ ತಾರತಮ್ಯಗಳನ್ನು ಮೀರಿ ಎಲ್ಲರಿಗೂ ದೊರಕಿಸುವಂತೆ ಮಾಡುವ ಕರ್ತವ್ಯ ಈ ಸಮಾಜದ್ದು. ಗ್ರಾಮೀಣ ಪ್ರದೇಶಗಳಲ್ಲಿ ಬಡ ಹೆಣ್ಣು ಮಕ್ಕಳನ್ನು ಶಾಲೆಗಳಿಗೆ ಬರುವಂತೆ ಮಾಡಲು ಸರಕಾರಗಳು ಬಹಳಷ್ಟು ಯೋಜನೆಗಳನ್ನು ಹಮ್ಮಿಕೊಂಡಿದ್ದು ಅವುಗಳು ಸರಿಯಾಗಿ ಅನುಷ್ಠಾನಗೊಳ್ಳುವಂತೆ ಜನಪ್ರತಿನಿಧಿಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ಸಾಮಾಜಿಕ ಚಿಂತಕರು ಕೆಲಸ ಮಾಡಬೇಕು. ಯಾವುದೇ ಪೂರ್ವಾಗ್ರಹ ಪೀಡಿತರಾಗದೇ ವಿಶ್ವಮಟ್ಟದಲ್ಲಿ ಉತ್ತಮವೆಂದು ಸಾಬೀತಾದ ಶಿಕ್ಷಣ ಪದ್ಧತಿಗಳನ್ನು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಚೌಕಟ್ಟಿನೊಳಗೆ ಅಳವಡಿಸಿ ಜ್ಯಾರಿಗೊಳಿಸ ಬೇಕು.

ಉನ್ನತ ಶಿಕ್ಷಣ ಮಟ್ಟದಲ್ಲಿಯೂ ಇಂದು ಅನೇಕ ಗೊಂದಲಗಳು ಕಾಣುತ್ತಿವೆ. ಬೆಳೆಯುತ್ತಿರುವ ಉದ್ಯಮಗಳಿಗೆ ಮಾನವ ಸಂಪನ್ಮೂಲವನ್ನು ಪೂರೈಸುವ ಕಾರ್ಖಾನೆಗಳಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ಬೆಳೆಯುತ್ತಿವೆ. ಬಹು ಬೇಡಿಕೆಯ ತಂತ್ರಜ್ಞಾನಿಗಳನ್ನು, ವ್ಯಾಪಾರ ವಹಿವಾಟು ನಿರ್ವಾಹಕರನ್ನು ಪೂರೈಸಲು ಅಣಬೆಗಳಂತೆ ಹುಟ್ಟಿಕೊಂಡ ಉನ್ನತ ಶಿಕ್ಷಣ ಸಂಸ್ಥೆಗಳು ಉತ್ತಮ ವಿದ್ಯಾರ್ಥಿಗಳನ್ನು ರೂಪಿಸುವಂತಹ ಅಧ್ಯಾಪಕರನ್ನು, ಸಂಶೋಧಕರನ್ನು ಮತ್ತು ಶಿಕ್ಷಣ ತಜ್ಞರನ್ನು ಹುಟ್ಟು ಹಾಕುವುದರಲ್ಲಿ ಹಿಂದೆ ಬಿದ್ದಿವೆ. ಇದರಿಂದಾಗಿ ಇಂತಹ ಬಹುತೇಕ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳ ಗುಣಮಟ್ಟವು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಗುಣಮಟ್ಟದಲ್ಲಿ ಇಲ್ಲವೆಂದು ಸ್ಪರ್ಧಾಯುಗದಲ್ಲಿ ಮೆರೆಯುವ ಉದ್ಯಮಗಳು ಹೇಳುತ್ತವೆ. ದೇಶದ ಮುಂದಿನ ತಲೆಮಾರು ಆಗಿರುವ ಇಂದಿನ ಯುವ ಜನತೆ, ಮುಖ್ಯವಾಗಿ ವಿದ್ಯಾರ್ಥಿ ಸಮುದಾಯವು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಎಷ್ಟು ಕ್ರಿಯಾಶೀಲವಾಗಿ ಇರಬೇಕೆಂಬ ಕುರಿತೂ ಚರ್ಚೆಗಳು ಹುಟ್ಟಿಕೊಂಡಿವೆ. ದೇಶದ ರಾಜಕೀಯ ವಿಚಾರಗಳಲ್ಲಿ ಮತ್ತು ಸಾಮಾಜಿಕ ಅಲ್ಲೋಲಕಲ್ಲೋಲಗಳಲ್ಲಿ ವಿದ್ಯಾರ್ಥಿಗಳು ವ್ಯಕ್ತ ಪಡಿಸುವ ಪ್ರತಿಕ್ರಿಯೆಗಳು ಅವರ ಆಶೋತ್ತರಗಳನ್ನು ಬಿಂಬಿಸುತ್ತಿವೆಯೇ ಅಥವಾ ಅವರನ್ನು ರಾಜಕೀಯ ಶಕ್ತಿಗಳು ದುರುಪಯೋಗ ಪಡಿಸುತ್ತಿವೆಯೇ ಎಂದು ಸಾಮಾಜಿಕ ಚಿಂತಕರು ಆಲೋಚಿಸುತ್ತಿದ್ದಾರೆ.

ಅಭಿಮತದ ಈ ಸಂಚಿಕೆಯಲ್ಲಿ ಪ್ರಾಥಮಿಕ ಶಿಕ್ಷಣದ ಸಂದರ್ಭದಲ್ಲಿಯೇ ಅಳವಡಿಸಬಹುದಾದ ಕಲಿಕಾ ಪದ್ಧತಿಯಲ್ಲಿ ಗಟ್ಟಿ ವಾಚನದ ಕುರಿತು ಬರಹವೊಂದಿದೆ. ಕಳೆದ ಸಂಚಿಕೆಯಲ್ಲಿ ಕನ್ನಡ ಭಾಷೆಯ ಕುರಿತು ಸಖಾರಾಮ ಉಪ್ಪೂರು ಅವರು ನಡೆಸಿದ ಚಿಂತನೆಯನ್ನು ಈ ಸಂಚಿಕೆಯಲ್ಲಿ ಚಂದ್ರಶೇಖರ ಎನ್.ಪಿ. ಅವರು ಮುಂದುವರಿಸಿದ್ದಾರೆ. ಅಭಿಮತದ ಓದುಗರು ಈ ವೈಚಾರಿಕ ಚರ್ಚೆಯಲ್ಲಿ ಪಾಲ್ಗೊಂಡು ದೆಹಲಿಯಲ್ಲಿದ್ದು ನಾವು ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಯಾವ ಕೊಡುಗೆಯನ್ನು ನೀಡಬಹುದು ಎಂದು ಹೇಳಬಹುದು. ನಿಮ್ಮ ಪ್ರತಿಕ್ರಿಯೆಗಳಿಗಾಗಿ ಕಾಯುತ್ತಿದ್ದೇವೆ ಅ

*ಬಾಲಕೃಷ್ಣ ನಾಯ್ಕ್ ಡಿ.*

# ಗಣರಾಜ್ಯೋತ್ಸವದಲ್ಲಿ ಮನಸೂರೆಗೊಳಿಸಿದ ಕರ್ನಾಟಕದ 'ಕೊಡಗಿನ ಕಾಫಿ' ಸ್ತಬ್ಧಚಿತ್ರ




ನವದೆಹಲಿಯ ರಾಜಪಥದಲ್ಲಿ ಜನವರಿ 26ರಂದು ನಡೆದ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಸ್ತಬ್ಧಚಿತ್ರ ಪಾಲ್ಗೊಳ್ಳುವುದು ಹೆಮ್ಮೆಯ ಸಂಗತಿಯಾಗಿದೆ. ರಾಷ್ಟ್ರಮಟ್ಟದ ಆಯ್ಕೆ ಸಮಿತಿಯು ಎಲ್ಲಾ ರಾಜ್ಯಗಳಿಗೆ ಆಹ್ವಾನ ನೀಡಿ ರಾಜ್ಯ ಸರ್ಕಾರಗಳ ಸಮ್ಮತಿಯಂತೆ ಆಯಾ ರಾಜ್ಯಗಳ ವಿಶೇಷತೆ ಬಿಂಬಿಸುವ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡುತ್ತದೆ. ಕಿರು ಚಿತ್ರದೊಂದಿಗೆ ವಿಷಯ ಮಂಡನೆಯಾದ ನಂತರ ರಾಷ್ಟ್ರಮಟ್ಟದ ಸಮಿತಿಯು ಆಯ್ಕೆ ಮಾಡುತ್ತದೆ.  ಈ ಬಾರಿಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 16 ರಾಜ್ಯಗಳು, ಒಂದು ಕೇಂದ್ರಾಡಳಿತ ಪ್ರದೇಶ ಹಾಗು ಆರು ಕೇಂದ್ರ ಸರ್ಕಾರದ ಇಲಾಖೆಗಳ ಪರವಾಗಿ ಸ್ತಬ್ಧಚಿತ್ರಗಳು ಪಾಲ್ಗೊಂಡಿದ್ದವು.

ಕರ್ನಾಟಕ ಸರ್ಕಾರದ ಪರವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸ್ತಬ್ಧಚಿತ್ರದ ಜವಾಬ್ದಾರಿಯನ್ನು ಹೊಂದಿದೆ. 1999–2000 ರಿಂದ ಸ್ತಬ್ಧಚಿತ್ರವನ್ನು ಪ್ರಸುತಪಡಿಸುತಿದೆ. 2008 ರಿಂದ ಈ ವರೆಗೆ ಸತತವಾಗಿ ಪ್ರಸ್ತುತಪಡಿಸುತ್ತಿದ್ದು, ಈ ಬಾರಿ 'ಕೊಡಗು: ಕಾಫಿಯ ನಾಡು' ಸ್ತಬ್ಧಚಿತ್ರವನ್ನು ಪ್ರಸ್ತುತ ಪಡಿಸಿತ್ತು. ರಾಜಪಥದಲ್ಲಿ ಘಮಘಮಿಸುವ ಕಾಫಿಯೊತ್ತ ಈ ಕಾಫಿ ಸ್ತಬ್ಧಚಿತ್ರವು ನೋಡುಗರ ಮನಸೂರೆಗೊಳಿಸಿತು.

ಕೊರೆಯುವ ಚಳಿಗೆ ಕಾಫಿ ಬೇಕೆನಿಸುವ ಹೊತ್ತಿಗೆ 'ಕೊಡಗು–ಕಾಫಿಯ ನಾಡು' ಸ್ತಬ್ಧಚಿತ್ರವು ರಾಜಪಥದುದ್ದಕ್ಕೂ ಬಿಸಿ ಕಾಫಿಯ ಸವಿಯನ್ನು ಆಸ್ವಾದಿಸುವ ಭಾವನೆಯನ್ನು ಮೂಡಿಸಿತು. ಸ್ತಬ್ಧ ಚಿತ್ರ, ವಾಹನದ ಮುಂಭಾಗದಲ್ಲಿ ಬೃಹದಾಕಾರದ ಲೋಟದಿಂದ ಬಟ್ಟಲಿಗೆ ಕಾಫಿಯನ್ನು ಸುರಿಸುತ್ತಿರುವಂತೆ ಚಿತ್ರಿಸಲಾಗಿತ್ತು. ಕಾಫಿಯ ಪರಿಮಳದ ಸುವಾಸನೆಯೂ ಬರುವಂತೆ ಮಾಡಲಾಗಿತ್ತು. ಕಾಫಿ ಬೀಜಗಳ ರಾಶಿಯ ನಡುವೆ ಇರುವ ಲೋಟಕ್ಕೆ ಬಟ್ಟಲಿನಿಂದ ಕಾಫಿಯನ್ನು ಸುರಿಸುತ್ತಿತ್ತು. ಫಿಲ್ಟರ್ ಕಾಫಿ ತಯಾರಿಸುವ ಪಾತ್ರೆಗಳು, ಸಕ್ಕರೆ ಬಟ್ಟಲುಗಳು ಎದ್ದು ಕಾಣುವಂತೆ ಕಾಫಿಯ ಪರಿಕರಗಳನ್ನೂ ಬಿಂಬಿಸಲಾಗಿತ್ತು. ಕಾಫಿ ಬೀಜ ಬಿತ್ತನೆಯಿಂದ ಹಿಡಿದು ಸಂಸ್ಕರಣೆಗೊಂಡು ಕಾಫಿ ಪುಡಿಯಾಗಿ ಕಾಫಿಯಾಗಿ ಬಟ್ಟಲಿಗೆ ಬರುವ ವಿವಿಧ ಹಂತಗಳನ್ನು ಈ ಟ್ಯಾಬ್ಲೋದಲ್ಲಿ ಪ್ರದರ್ಶಿಸಲಾಗಿತ್ತು. ಪ್ರಧಾನ ಭಾಗದಲ್ಲಿ ಕಾಫಿ ತೋಟದಲ್ಲಿ ಕಾಫಿ ಹಣ್ಣು ಕೀಳುತ್ತಿರುವ ಮಹಿಳೆಯು ಕಾಫಿ ಬೀಜವನ್ನು ಕೀಳಲು ತಿರುಗುತ್ತಿದ್ದ ಚಿತ್ರ ಆಕರ್ಷಣೀಯವಾಗಿತ್ತು. ಹಾಗೆಯೇ, ಕಾಫಿ ನಮ್ಮ ದೈನಂದಿನ ಜೀವನದಲ್ಲಿ ಆಕರ್ಷಕವೂ, ಆಸ್ವಾದನೀಯವೂ ಆದ ಪಾನೀಯ ಎನ್ನುವುದನ್ನು ಪ್ರತಿಬಿಂಬಿಸಲಾಗಿತ್ತು. ಕಾಫಿ ಹಣ್ಣುಗಳನ್ನು ಹಸನಗೊಳಿಸುತ್ತಿರುವ ಮತ್ತು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ವಿವಿಧ ಹಂತಗಳನ್ನು ತೋರಿಸಲಾಗಿತ್ತು. ಸ್ತಬ್ಧಚಿತ್ರದ ಮೇಲ್ಭಾಗದಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವವರು ಮತ್ತು ವಿವಿಧ ಹಂತಗಳನ್ನು ಪರೀಶೀಲಿಸುವ 'ಕಾಫಿ ತೋಟದ ಮಾಲೀಕರಾಗಿ' ಕೊಡಗಿನ ಕುರಿತಾದ ಗಣಪತಿ ಕವಿತಾ, ಸಿ.ಎಂ. ಸಚ್ಚಿ, ಕೆ. ಸೋಮಯ್ಯ ಹಾಗೂ ನೇವಿ ಚಾರ್ಲೇ ಪಾಲ್ಗೊಂಡಿದ್ದರು. ಕಾಫಿ ಎಸ್ಟೇಟ್‌ಗಳಲ್ಲಿರುವ ನಾಯಿಗಳ ಚಿತ್ರವನ್ನು ಸಹಾ ಅಳವಡಿಸಲಾಗಿತ್ತು.

ಕಾಫಿಯ ಬಿಸಿ ಹಬೆಯು ಆವರಿಸುತ್ತಿರುವುದನ್ನು ಕಂಡು  ಕೇಂದ್ರ ಸಚಿವರಾದ ಶ್ರೀ ಅನಂತ ಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡ ಮತ್ತಿತರ ಗಣ್ಯರೂ ಸೇರಿದಂತೆ ಎಲ್ಲ ಜನಸ್ತೋಮ ಎದ್ದು ನಿಂತು ಹರ್ಷ ವ್ಯಕ್ತಪಡಿಸಿದರು. ಕಾಫಿ ಕಪ್‌ನಲ್ಲಿ ವಿಶ್ವಕ್ಕೇ ಕಾಫಿಯ ಸ್ವಾದವನ್ನು ಪಸರಿಸುವಂತೆ ಬಿಂಬಿಸಲಾಗಿದೆ. ಅಂತರರಾಷ್ಟ್ರೀಯ ಖ್ಯಾತಿಯ ಕಲಾ ನಿರ್ದೇಶಕ ಶಶಿಧರ ಅಡಪ ಹಾಗು ಅವರ ತಂಡದವರು ಸ್ತಬ್ಧ ಚಿತ್ರವನ್ನು ಆಕರ್ಷಕವಾಗಿ ರೂಪಿಸಿದ್ದರು. ಯುವ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರ ಸಂಗೀತವನ್ನು ರಚಿಸಿದ್ದರು.

ಕಾಫಿಯನ್ನು ಜಾಗತಿಕ ಮಾರುಕಟ್ಟೆಗೆ ಆಕರ್ಷಿಸಿ, ಕಾಫಿ ಉದ್ಯಮವನ್ನು ಪ್ರೋತ್ಸಾಹಿಸುವುದರ ಜೊತೆಗೆ ಉದ್ಯೋಗ ಸೃಷ್ಟಿಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ಬೆಟ್ಟದಿಂದ ಬಟ್ಟಲಿನವರೆಗೆ ಎಂಬುದನ್ನು ಸಾಂಕೇತಿಕವಾಗಿ ಚಿತ್ರಿಸಲು ಶ್ರಮಿಸಲಾಯಿತು. ರಾಷ್ಟ್ರಮಟ್ಟದ ಸಮಿತಿಯು ಆಯ್ಕೆ ಮಾಡಿದ ಈ ವಿಷಯವನ್ನು ತಜ್ಞರ ಸಲಹೆ, ಸಮಿತಿಯ ಸಲಹೆಗಳನ್ನು ಪಡೆದು ರೂಪಿಸಿ ಯಶಸ್ವಿಯಾಗಿ ಪ್ರದರ್ಶಿಸಲಾಯಿತು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್. ಆರ್. ವಿಶು ಕುಮಾರ್ ತಿಳಿಸಿದ್ದಾರೆ. ಕರ್ನಾಟಕ ವಾರ್ತಾ ಕೇಂದ್ರದ ಉಪನಿರ್ದೇಶಕ ಶ್ರೀ ಹೆಚ್. ಶ್ರೀನಿವಾಸ ಸಮನ್ವಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಅ

***ಅಮರೇಶ್***



ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಕರ್ನಾಟಕ ರಾಜ್ಯದ ಪರವಾಗಿ ಪಾಲ್ಗೊಳ್ಳುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಕೊಡಗು: ಕಾಫಿಯ ನಾಡು' ಸ್ತಬ್ಧಚಿತ್ರವನ್ನು ನಿವಾಸಿ ಆಯುಕ್ತರಾದ ಶ್ರೀ ಅತುಲ್ ಕುಮಾರ್ ತಿವಾರಿ ಹಾಗು ಉಪ ನಿವಾಸಿ ಆಯುಕ್ತರಾದ ಶ್ರೀಮತಿ ಆ್ಯನಿಸ್ ಕಣ್ಮಣಿ ಜಾಯ್ ವೀಕ್ಷಿಸಿದರು. ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಪಿ.ಎನ್. ಗುರುಮೂರ್ತಿ,  ವಾರ್ತಾಧಿಕಾರಿ  ಹೆಚ್. ಶ್ರೀನಿವಾಸ, ಇಲಾಖೆಯ ಆರ್. ಪ್ರಕಾಶ್, ಅಂತರರಾಷ್ಟ್ರೀಯ ಖ್ಯಾತಿಯ ಕಲಾ ನಿರ್ದೇಶಕ ಶಶಿಧರ ಅಡಪ, ಕರ್ನಾಟಕ ಭವನದ ಶಂಭು ಲಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಕಲಿಕಾ ಕೌಶಲ್ಯದಲ್ಲಿ ಗಟ್ಟಿ ವಾಚನ

ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ ಅನಿವಾರ್ಯ. ಸಂಕೀರ್ಣ ಪ್ರಪಂಚದಲ್ಲಿ ಶಿಕ್ಷಣದಿಂದ ವಂಚಿತರಾದರೆ ಬದುಕು ಕಠಿಣವಾಗುತ್ತದೆ ಎಂಬುದು ಸರ್ವ ಸಮ್ಮತವಾದದ್ದು. ಪೋಷಕರು ಮಕ್ಕಳನ್ನು ಓದುವ ಅಭ್ಯಾಸದಲ್ಲಿ ತೊಡಗಿಸುವುದು ದೈನಂದಿನ ಪ್ರಕ್ರಿಯೆಯಲ್ಲಿ ಸಾಮಾನ್ಯವಾಗಿದೆ. ಆದರೆ ಮಕ್ಕಳು ಆಸಕ್ತಿ ವಹಿಸುತ್ತಿದ್ದಾರೆಯೇ? ಅಥವಾ ಇಲ್ಲವೇ? ಎಂಬುದನ್ನು ಗಮನಿಸಬೇಕಾಗುತ್ತದೆ. ಒಂದೊಂದು ಮಗುವು ವಿಭಿನ್ನವಾದದ್ದು ಒಡಹುಟ್ಟಿದವರೇ ಆಗಿದ್ದರೂ ಎಲ್ಲಾ ವಿಚಾರದಲ್ಲಿಯೂ ವ್ಯತ್ಯಾಸವನ್ನು ಕಾಣುತ್ತೇವೆ. ಅದು ಓದುವ ಅಭ್ಯಾಸದಲ್ಲಿಯೂ ಆಗಿರಬಹುದು. ಒಂದು ಮಗು ಗಟ್ಟಿಯಾಗಿ ಓದಿದರೆ ಮತ್ತೊಂದು ಮೌನ ಓದಿಗೆ ಶರಣಾಗುತ್ತದೆ.

ನನ್ನ ಈ ಅಂಕಣ ಗಟ್ಟಿ ವಾಚನ ಮಕ್ಕಳಲ್ಲಿ ಎಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ವಿವರಿಸುವುದಾಗಿದೆ. ನಾನು ಒಬ್ಬ ಶಿಕ್ಷಕಿಯಾಗಿದ್ದು, ಪೋಷಕಳೂ ಸಹ ಆಗಿರುವುದರಿಂದ ಎರಡರಲ್ಲೂ ತೌಲನಿಕ ಅಂಶಗಳನ್ನು ತುಲನೀಕರಿಸಿ ಬರೆಯುತ್ತಿದ್ದೇನೆ. ಮಕ್ಕಳ ಪ್ರಾಥಮಿಕ ಕಲಿಕಾ ಹಂತದಲ್ಲಿ ಅವರು ಹೊಸ ವಸ್ತುವನ್ನು ನೋಡಿ ಆಕರ್ಷಿತರಾಗುವುದು, ಆನಂದದಿಂದ ಬಣ್ಣ ಹಚ್ಚುವುದು ಮುಂತಾದ ಕ್ರಿಯೆಯಿಂದ ಓದುವತ್ತ ಹೊರಳುತ್ತಾರೆ. ಆದರೆ ಕೆಲವು ಮಕ್ಕಳು ಬಹಳ ಶೀಘ್ರವಾಗಿಯೇ ಆಸಕ್ತಿ ಕಳೆದುಕೊಳ್ಳುತ್ತಾರೆ. ಅವರು ಗಮನ ವಿಚಲಿತಗೊಂಡು ಪರ್ಯಾಯ ಆಟಿಕೆಗಳಲ್ಲಿ ಆಸಕ್ತಿ ತೋರಿಸುತ್ತಾರೆ. ಅಂತಹ ಸಂದರ್ಭದಲ್ಲಿ ಗಟ್ಟಿ ವಾಚನ ಬಹಳ ಮುಖ್ಯ. ಯಾಕೆಂದರೆ ಪೋಷಕರ ಭಯದಿಂದ ಅಥವಾ ಅವರ ಪ್ರೇರೇಪಣೆಯಿಂದ ಪುಸ್ತಕ ಹಿಡಿದು ಓದಲು ಕುಳಿತು ಗಟ್ಟಿ ವಾಚನ ಆರಂಭಿಸಿದರೆ ಗಮನವು ಅಕ್ಷರಗಳ ಮೇಲೆ ಬಿದ್ದು, ಮನಸ್ಸು ಬುದ್ಧಿ ಜ್ಞಾನೇಂದ್ರಿಯಗಳೆಲ್ಲವೂ ಕಾರ್ಯ ಪ್ರವೃತ್ತವಾಗುವುದು. ಮಕ್ಕಳು ಮೇಣವಿದ್ದಂತೆ ಹೇಗೆ ನಾವು ಮೂರ್ತಿ ಮಾಡಿದರೂ ಹಾಗೆ ಮೂಡುತ್ತವೆ. ದೇವರು ನಮಗೆ ಕೊಟ್ಟಿರುವ ವರ 'ಜ್ಞಾಪಕ ಶಕ್ತಿ'. ಅದರಲ್ಲೂ ಮಕ್ಕಳಿಗೆ ಸಮೃದ್ಧವಾಗಿರುತ್ತದೆ. ಒಮ್ಮೆ ಗಟ್ಟಿ ವಾಚನ ಮಾಡಿದಲ್ಲಿ ಓದಿದ ಶಬ್ದಗಳು ಕರ್ಣಗಳಲ್ಲಿ ತರಂಗದೋಪಾದಿಯಲ್ಲಿ ರಿಂಗಣಿಸುತ್ತಿರುತ್ತದೆ. "ಆಗ ನಾನು ಈ ವಿಷಯವನ್ನು ಕೊಠಡಿಯ ಮೂಲೆಯಲ್ಲಿ ಓದಿದ್ದೆ ತಪ್ಪಾಗಿ ಓದಿದ್ದಕ್ಕೆ ಅಪ್ಪ ಅದನ್ನು ತಿದ್ದಿದರು. ನನಗೆ ನೆನಪಿದೆ" ಎಂಬೀ ಮಾತುಗಳು ಎಲ್ಲಾ ಪೋಷಕರಿಗೂ ಅನುಭವಕ್ಕೆ ಬಂದಿರುತ್ತದೆ. ಗಟ್ಟಿ ವಾಚನದಿಂದಾಗಿ ಆಸಕ್ತಿ, ಗಮನ ಕೇಂದ್ರೀಕರಿಸುವ ಕ್ರಿಯೆಗಳನ್ನು ಮೈಗೂಡಿಸಿಕೊಳ್ಳಬಹುದು.

ಪದಗಳನ್ನು, ವಾಕ್ಯಗಳನ್ನು ಗಟ್ಟಿಯಾಗಿ ಶಬ್ದದೊಂದಿಗೆ ಬೇರೆಯವರಿಗೆ ಕೇಳುವಂತೆ ಓದುವುದೇ ಗಟ್ಟಿವಾಚನ. ಪದಗಳನ್ನು ನೋಡುತ್ತಾ ಸಂಯೋಜಿಸಿಕೊಂಡು ಅರ್ಥ ಮಾಡಿಕೊಳ್ಳುತ್ತಾ ಅಗತ್ಯ ಧ್ವನಿ ಏರಿಳಿತಗಳೊಂದಿಗೆ ಓದುವ ಕ್ರಿಯೆ ಗಟ್ಟಿವಾಚನ. ಶಬ್ದ ಪ್ರಧಾನವಾಗಿರುವ ಗಟ್ಟಿ ವಾಚನದಲ್ಲಿ ವಾಕ್ಯಗಳ ಸುಸ್ಪಷ್ಟ ಉಚ್ಚಾರ, ನಿರರ್ಗಳತೆ ಮತ್ತು ಧ್ವನಿ ಏರಿಳಿತಗಳು ಒಳಗೊಂಡಿರುತ್ತವೆ. ಗಟ್ಟಿ ವಾಚನ ಕ್ರಿಯೆಯಲ್ಲಿ ಕಣ್ಣು, ಮನಸ್ಸು ಹಾಗೂ ಧ್ವನ್ಯಾಂಗಗಳು ಸಮನ್ವಯಗೊಂಡು ಕೆಲಸ ಮಾಡುತ್ತವೆ. ಸಮೀಕ್ಷೆಯೊಂದರ ಪ್ರಕಾರ ಗಟ್ಟಿ ವಾಚನ ಮಾಡಿರುವವರಲ್ಲಿ ಮಾತುಗಾರಿಕೆಯು ಬಹಳ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ.

ಹಿಂದೆ ಗುರುಕುಲ ಪದ್ಧತಿಯಲ್ಲಿ 64 ವಿದ್ಯೆಗಳನ್ನು ಮೌಖಿಕವಾಗಿ ಗಟ್ಟಿವಾಚನಗಳಿಂದಲೇ ಕಲಿಯುತ್ತಿದ್ದರು. ತಪ್ಪು ವಾಚನವಾಗಲಿ, ಮರೆಗುಳಿತವಾಗಲಿ ಇರಲಿಲ್ಲ. ಕಾರಣ ನಿರರ್ಗಳವಾದ ಉಚ್ಚಾರಣೆಯಿಂದ ಉಂಟಾಗುತ್ತಿದ್ದ ಏಕಾಗ್ರತೆಯ ಫಲ.

ನಮ್ಮ ನಾಡಿನ ಸಂಸ್ಕೃತಿ, ಕಲೆ, ಸಾಂಸ್ಕೃತಿಕ ಕಲಾ ವೈಭವ 'ಜಾನಪದ' ಜನಪದದ ತಳಪಾಯ ಮೌಖಿಕತೆ, ಬಾಯಿಯಿಂದ ಬಾಯಿಗೆ ಪರಂಪರೆಯೋಪಾದಿಯಲ್ಲಿ ಮೂಡಿ ಬಂದಿರುವ ಗೀತೆ, ಕಥೆ, ನಾಟಕಗಳು, ಯಕ್ಷಗಾನ, ಹರಿಕಥೆ, ಕೀರ್ತನೆ, ತ್ರಿಪದಿಗಳು, ಭಜನೆ ನಮ್ಮ ದೇಶದ ಪ್ರೌಢಿಮೆಯನ್ನು ಎತ್ತಿ ಮೆರೆಸುವ ಎಲ್ಲಾ ಪ್ರಕಾರಗಳು ಮೌಖಿಕ ಹಾಗೂ ಗಟ್ಟಿವಾಚನಗಳ ಮೂಲದಿಂದಲೇ ಬಂದಿರುವುದೆಂದರೆ ತಪ್ಪಾಗಲಾರದು. ಇಷ್ಟೆಲ್ಲಾ ಹಿನ್ನೆಲೆಯುಳ್ಳ ಗಟ್ಟಿವಾಚನ ಆಧುನಿಕ ಬದುಕಿನಲ್ಲಿ ಪ್ರಾಮುಖ್ಯತೆ ಹೊಂದಿದೆ. ಮಕ್ಕಳ ಮನಸ್ಸು ಮರ್ಕಟವಿದ್ದಂತೆ. ಕ್ಷಣ ಚಿತ್ತ, ಕ್ಷಣ ಪಿತ್ತ. ಚಿಕ್ಕ ವಯಸ್ಸಿನಲ್ಲಿ ನಾವೆಲ್ಲಾ ಶಿಶುವಿಹಾರಕ್ಕೆ ಹೋಗುತ್ತಿದ್ದೆವು. ಅಲ್ಲಿ ಕಲಿಸಿದ ಶ್ಲೋಕಗಳು ಈಗಲೂ ನೆನಪಿನಾಳದಲ್ಲಿ ಬೇರೂರಿವೆ. ನಿದ್ದೆಯಲ್ಲೂ ಕೇಳಿದರೂ ಅವನ್ನು ತಪ್ಪಿಲ್ಲದೆ ಹೇಳುತ್ತೇವೆ. ಕಾರಣ ಗಟ್ಟಿ ವಾಚನದಲ್ಲಿ ಕಲಿತ ಪರಿಣಾಮ.

ಗಟ್ಟಿ ವಾಚನದಲ್ಲಿ ನೇರವಾಗಿ ಪುಸ್ತಕ ಹಿಡಿದು ಕುಳಿತು ಅಕ್ಷರಗಳನ್ನು ಸುಸ್ಪಷ್ಟವಾಗಿ ಓದಿದರೆ ಆಸಕ್ತಿ, ಉತ್ಸಾಹ ಉಂಟಾಗುತ್ತದೆ. ವಾಕ್ಯಗಳನ್ನು ಸಂಯೋಜಿಸುವುದು, ಲೇಖನ ಚಿಹ್ನೆಗಳನ್ನು ಅಳವಡಿಸುವುದು ರಸಭಾವದೊಂದಿಗೆ ಓದಬಹುದು. ಅಂದರೆ ಕೋಪ, ಸಂತಸ, ಹಾಸ್ಯ, ಪ್ರೀತಿ, ವಾತ್ಸಲ್ಯ, ಮದ, ಮಾತ್ಸರ್ಯ, ವ್ಯಂಗ್ಯ, ದುಃಖ ಎಲ್ಲ ಸಂದರ್ಭವನ್ನು ಅಭಿವ್ಯಕ್ತಿಸುತ್ತಾ ಓದಿದರೆ ಒಂದು ಗುಂಪೇ ಓದಿದಂತಾಗುತ್ತದೆ. ಅನಕ್ಷರಸ್ಥರಿಗೂ / ಅಂಗವಿಕಲರಿಗೂ ತಿಳಿಸಬಹುದು, ಕಲಿಸಬಹುದು. ನುಡಿಮುತ್ತುಗಳನ್ನು ಸ್ವಾರಸ್ಯವಾಗಿ ಓದಬಹುದು. ವ್ಯಾಕರಣಾಂಶಗಳಾದ ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಸಂಯುಕ್ತಾಕ್ಷರ ಸರಿಯಾಗಿ ಓದಬಹುದು. ಗಟ್ಟಿ ವಾಚನದಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಯಾರಲ್ಲಿ ಆತ್ಮವಿಶ್ವಾಸವಿರುತ್ತದೆಯೋ ಅವರು ಪ್ರಪಂಚವನ್ನೇ ಗೆಲ್ಲಬಹುದು ಇದು ಲೋಕ ರೂಢಿಯ ಮಾತು.

ಒಟ್ಟಾರೆ ಗಟ್ಟಿ ವಾಚನ ಕಲಿಕೆಯ ಪ್ರಾಥಮಿಕ ಹಂತದಲ್ಲಿ ಅನಿವಾರ್ಯ ಅವಶ್ಯಕ ಅದರಲ್ಲೂ ಮಕ್ಕಳು ಗಟ್ಟಿ ವಾಚನದಿಂದಲೇ ಕಲಿಯಬೇಕು. ಯಾವಾಗ ತಮ್ಮ ಮೇಲೆ ತಮಗೆ ಭರವಸೆ ಆತ್ಮ ವಿಶ್ವಾಸ, ಛಲ ಮೂಡಿ ಬರುತ್ತದೆ, ಆಗ ಓದುವ ಪ್ರಕ್ರಿಯೆ ವೈಯಕ್ತಿಕವಾಗುತ್ತದೆ. ಅ

*ಎಂ.ಎಸ್. ಲಾವಣ್ಯ ಬಸವರಾಜ*



# ಕನ್ನಡ ಭಾಷೆಯನ್ನು ಬೆಳೆಸುವುದು ಹೇಗೆ?

**ಒಂದು ಚಿಂತನೆ– ಭಾಗ– 2**

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಕನ್ನಡ ಭಾಷೆಯನ್ನು ಬೆಳೆಸುವುದು ಹೇಗೆ? ಎಂಬ ಲೇಖನದಲ್ಲಿನ ಬಗ್ಗೆ ಸ್ನೇಹಿತರಾದ ಸಖಾರಾಮ ಉಪ್ಪೂರು ಅವರ ಚಿಂತನೆಗಳನ್ನು ಓದಿದ ಮೇಲೆ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಹೊರನಾಡ ಕನ್ನಡಿಗರ ಪಾತ್ರವನ್ನು ಕುರಿತಂತೆ ಚಿಂತನೆ ನಡೆಸುತ್ತಿದ್ದಾಗ ನನಗನ್ನಿಸಿದ ಕೆಲವು ಭಾವನೆಗಳಿವು.

ಕನ್ನಡ ಸಾಹಿತ್ಯ ಮತ್ತು ಭಾಷೆಯ ಇತಿಹಾಸವನ್ನು ಅಧ್ಯಯನ ಮಾಡಿರುವವರಿಗೆ ತಿಳಿದಿರುವಂತೆ ಕನ್ನಡ ಭಾಷೆ ಮೊದಲು ಲಿಖಿತ ರೂಪದಲ್ಲಿ ಕಂಡುಬಂದಿರುವ–ಕ್ರಿ.ಶ. 450 ರ ಹಲ್ಮಿಡಿ ಶಾಸನ (ಇತ್ತೀಚೆಗೆ ಅದಕ್ಕೂ ಮೊದಲಿನ ಕುರಿಕ್ಯಾಲ ಶಾಸನದಲ್ಲೆಯೇ ಕನ್ನಡ ಭಾಷೆ ಬಳಕೆಯಿತ್ತೆಂದು ವಿದ್ವಾಂಸರ ಅಭಿಪ್ರಾಯವೂ ಇದೆ)ದಿಂದ ಮೊದಲ್ಗೊಂಡು ಕಪ್ಪೆ ಅರಭಟ್ಟನ ಶಾಸನ, ಶ್ರೀ ವಿಜಯನ ಕವಿರಾಜಮಾರ್ಗ ವಡ್ಡಾರಾಧನೆ ಮೊದಲಾದ ಕೃತಿಗಳಲ್ಲಿ ಸಂಸ್ಕೃತ ಮತ್ತು ಪ್ರಾಕೃತಗಳೊಂದಿಗೆ ಬಳಕೆಗೊಳ್ಳುತ್ತಿದ್ದ ಪೂರ್ವದ ಹಳಗನ್ನಡ, ಅನಂತರ 10 ನೇ ಶತಮಾನದ ಕನ್ನಡದ ರತ್ನತ್ರಯರಾದ ಪಂಪ, ಪೊನ್ನ, ರನ್ನ ಕವಿಗಳ ಕೃತಿಗಳಿಗೆ ಆಕರಗಳಾದ ಸಂಸ್ಕೃತ ಕಾವ್ಯಗಳನ್ನು ಅನುಕರಿಸಿ ಚಂಪೂ, ಕಂದಪದ್ಯಗಳೊಂದಿಗೆ ಮೈವೆತ್ತಿದ್ದ ಹಳಗನ್ನಡ, ತದನಂತರ ಬಂದ ವಚನಕಾರರು, ಕೀರ್ತನಕಾರರು ಕುಮಾರವ್ಯಾಸ, ರತ್ನಾಕರವರ್ಣಿ ಮೊದಲಾದ ಕವಿಗಳ ಭಾವನೆಗಳಿಗೆ ಅಭಿವ್ಯಕ್ತಿರೂಪ ನೀಡಿದ ನಡುಗನ್ನಡ, ಇಪ್ಪತ್ತನೆ ಶತಮಾನದ ಹುಲುಸಾಗಿ ಬೆಳೆದು ಭಾರತೀಯ ಭಾಷೆ ಹಾಗೂ ಸಾಹಿತ್ಯಕ್ಷೇತ್ರದಲ್ಲಿ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದು ವಿರಾಜಿಸುತ್ತಿರುವ ಹೊಸಗನ್ನಡ–ಈ ಎಲ್ಲ ಹಂತಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕನ್ನಡ ಭಾಷೆಗೆ ಈ ಹಿಂದೆಯೂ ಕೂಡ ಅನೇಕ ಸಂದರ್ಭಗಳಲ್ಲಿ ಅಸ್ತಿತ್ವದ ಸವಾಲು ಎದುರಾಗುತ್ತಲೇ ಬರುತ್ತಿತ್ತೆಂಬುದೂ (ಅಂಡಯ್ಯ ಕವಿಯ 'ಕಬ್ಬಿಗರ ಕಾವ' ಮತ್ತು ಮುಖ್ಯವಾಗಿ ನಯಸೇನನ ಧರ್ಮಾಮೃತದಲ್ಲಿ) ಅದಕ್ಕೆ ಅಂದಂದಿನ ಬರಹಗಾರರು, ಕವಿಗಳು ಸ್ಪಂದಿಸಿ ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ನೆರವಾಗಿರುವರೆಂಬುದೂ ಸ್ಪಷ್ಟವಾಗುತ್ತದೆ.

ಇನ್ನು ಇಂದಿನ ಜಾಗತೀಕರಣ ಯುಗದಲ್ಲಿ ನಮ್ಮ ಭಾಷೆಯೂ ಸೇರಿದಂತೆ ವಿಶ್ವದ ಹಲವಾರು ಭಾಷೆಗಳು ಅಳಿವು–ಉಳಿವಿನ ಸವಾಲನ್ನು ಎದುರಿಸುತ್ತಿರುವ ಕುರಿತು ಯುನೆಸ್ಕೊ ಮುಂತಾದ ಸಂಸ್ಥೆಗಳು ನೀಡಿರುವ ವರದಿಗಳು ಸಹಜವಾಗಿಯೇ ಕನ್ನಡಿಗರೂ ಸೇರಿದಂತೆ, ಅಂತಹ ಸವಾಲನ್ನು ಎದುರಿಸುತ್ತಿರುವ ಭಾಷೆಗಳ ಎಲ್ಲ ಭಾಷಿಕರಲ್ಲಿ ಆತಂಕ ಮೂಡಿಸಿವೆ.

ಇಂತಹ ಸಂದರ್ಭದಲ್ಲಿ ಉದ್ಯೋಗ, ವಿದ್ಯಾಭ್ಯಾಸ, ವಿವಾಹ ಸಂಬಂಧ ಮತ್ತಿತರ ಅನೇಕ ಕಾರಣಗಳಿಂದಾಗಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಮತ್ತು ವಿದೇಶಗಳಲ್ಲಿ ಹೋಗಿ ನೆಲೆಸುತ್ತಿರುವ ಹೊರನಾಡಿನ ಕನ್ನಡಿಗರು ಕನ್ನಡವನ್ನು ಉಳಿಸಿ ಬೆಳೆಸುವ ಕೆಲಸವನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ಏಕೆಂದರೆ ತೊಂಭತ್ತರ ದಶಕದಲ್ಲಿ ಭಾರತ ದೇಶ ಆರ್ಥಿಕ ಉದಾರೀಕರಣಕ್ಕೆ ತನ್ನನ್ನು ತೆರೆದುಕೊಂಡ ನಂತರದಲ್ಲಿ ಹೊರನಾಡಿನಲ್ಲಿ ನೆಲೆಸುತ್ತಿರುವ ಕನ್ನಡಿಗರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಒಂದೆಡೆಯಾದರೆ ಕನ್ನಡನಾಡಿನೊಳಗೆ (ಪ್ರಮುಖ ನಗರಗಳಿಗೆ ಮುಖ್ಯವಾಗಿ ಬೆಂಗಳೂರು) ಹರಿದು ಬರುತ್ತಿರುವ ಇತರೆ ಭಾಷಿಕರ ಸಂಖ್ಯೆಯೂ ಕೂಡ ದುಪ್ಪಟ್ಟು ಹೆಚ್ಚುತ್ತಿದೆ. ಇದರ ಜೊತೆಗೆ ಇಂಗ್ಲಿಷ್, ಹಿಂದಿಗಳ ಪ್ರಭಾವಕ್ಕೆ ಹಾಗೂ ಪ್ರವಾಹಕ್ಕೆ ಸಿಕ್ಕಿ ನಲುಗುತ್ತಿರುವ ಕನ್ನಡಕ್ಕೆ ಶಕ್ತಿ ತುಂಬಬೇಕಾದ ಅವಶ್ಯಕತೆ ಇಂದು ಹೆಚ್ಚಾಗಿದೆ.

ಹೊರನಾಡಿನಲ್ಲಿ ಬದುಕು ಕಟ್ಟಿಕೊಂಡಿರುವ ನಾವೆಲ್ಲ ಕನ್ನಡಿಗರು ಕ್ರೈಸ್ತ ಮಿಷನರಿಗಳಾದ ರೆವೆರೆಂಡ್ ಫರ್ಡಿನಾಂಡ್ ಕಿಟ್ಟೆಲ್, ಇ.ಪಿ. ರೈಸ್, ಬಿ.ಎಲ್.ರೈಸ್, ಮೊಗ್ಲಿಂಗ್ ಮೊದಲಾದ ಮಹನೀಯರು ಕನ್ನಡಕ್ಕೆ ನೀಡಿದ ಕೊಡುಗೆಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಬೇಕು. ಕನ್ನಡ ಮಾತೃಭಾಷೆಯಲ್ಲದ ಅವರೆಲ್ಲರೂ ದೂರದ ದೇಶಗಳಿಂದ ಉದ್ಯೋಗ ನಿಮಿತ್ತ ನಮ್ಮ ನಾಡಿಗೆ ಬಂದು ಸರಿಸುಮಾರು ಎರಡು ಶತಮಾನಗಳಷ್ಟು ಹಿಂದೆಯೇ ನಮ್ಮದೇ ಭಾಷೆಯನ್ನು ಕಲಿತು ನಮ್ಮ ಭಾಷೆಯ ವ್ಯಾಕರಣ, ಶಬ್ದಕೋಶಗಳನ್ನು ರಚಿಸಿ ಅವುಗಳನ್ನು ಇಂಗ್ಲೀಷ್‌ಗೆ ಭಾಷಾಂತರಿಸಿದ್ದಾರೆಂದಾದರೆ, ಕನ್ನಡ ಭಾಷಿಕರಾದ ನಾವು ನಮ್ಮ ಮಾತೃಭಾಷೆಯಲ್ಲಿರುವ ಉತ್ತಮ ಕೃತಿಗಳು, ಕತೆ, ಕವನಗಳು ಇತ್ಯಾದಿಗಳನ್ನು ಇಂಗ್ಲಿಷ್, ಹಿಂದಿ, ಮತ್ತಿತರ ಭಾಷೆಗಳಲ್ಲಿ ಭಾಷಾಂತರಿಸಿ ಕನ್ನಡೇತರರಿಗೆ ನಮ್ಮ ಭಾಷೆ, ಸಂಸ್ಕೃತಿಯ ಸೊಗಡನ್ನು ನಮ್ಮದೇ ಆದ ವಿಧಾನದಲ್ಲಿ ಪರಿಚಯಿಸಲು ಏಕೆ ಸಾಧ್ಯವಿಲ್ಲ? ಹೊರನಾಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೆ ಸಹಜವಾಗಿಯೇ ಕನ್ನಡದ ಜೊತೆ ಜೊತೆಗೆ ತಾವು ವಾಸಿಸುವ ಪರಿಸರದ ಭಾಷೆಯ ಮುಖ್ಯವಾಗಿ ಇಂಗ್ಲಿಷ್ ಅಥವಾ ಹಿಂದಿ (ಕೆಲವೊಮ್ಮೆ ಎರಡೂ ಭಾಷೆಗಳಲ್ಲೂ) ಗಳ ಜ್ಞಾನ ಇದ್ದೇ ಇರುತ್ತದೆ. ಅಲ್ಲದೆ ಒಂದು ಅಥವಾ ಎರಡು ತಲೆಮಾರು ಹೊರನಾಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರ ಮಕ್ಕಳಿಗೆ ಕನ್ನಡ ಭಾಷೆಗಿಂತಲೂ ವಾಸಿಸುತ್ತಿರುವ ನೆಲದ ಭಾಷೆ ಇನ್ನೂ ಚೆನ್ನಾಗಿ ತಿಳಿದಿರುತ್ತದೆ. ಅಂತಹ ಸಂದರ್ಭದಲ್ಲಿ ಪೋಷಕರು ತಮಗೆ ತಿಳಿದಿರುವ ತಮ್ಮ ತಮ್ಮ ಊರಿನ ಚರಿತ್ರೆ, ಆಳರಸರ ಕತೆ, ಕವಿತೆ, ಜನಪದ ಪ್ರಕಾರ ಇತ್ಯಾದಿಗಳನ್ನು ತಮ್ಮ ಮಕ್ಕಳ ಮೂಲಕ ಹಿಂದಿ ಅಥವಾ ಇಂಗ್ಲಿಷ್ ಮೂಲಕ ಭಾಷಾಂತರಿಸಿದರೆ ಅದರಿಂದ ನಮ್ಮ ನಾಡಿನ ಸಂಸ್ಕೃತಿಯನ್ನು ಪರಿಚಯಿಸುವುದರ ಜೊತೆಗೆ ಅದಕ್ಕೊಂದು ದಾಖಲೆಯ ರೂಪ ಕೊಟ್ಟಂತಾಗುತ್ತದೆ.

ನಮ್ಮ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯದಲ್ಲಿರುವ ಅದೆಷ್ಟೋ ಸಂಗತಿಗಳು ಇತರೆ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಗಳಿಗಿಂತ ಬಹಳಷ್ಟು ಉತ್ತಮ ಹಾಗೂ ಉದಾಹರಣಯೋಗ್ಯವಾಗಿರುತ್ತವೆ. ಆದರೆ ಅವುಗಳನ್ನು ದಾಖಲಿಸದೆ, ಭಾಷಾಂತರಿಸಿ ಕನ್ನಡೇತರರಿಗೆ ಪರಿಚಯಿಸದಿದ್ದರೆ ಅವು ಮೌಖಿಕ ಪರಂಪರೆಯಲ್ಲಿಯೇ ಇದ್ದು ಸ್ತಬ್ಧಗೊಂಡುಬಿಡುತ್ತವೆ. ಇತ್ತೀಚೆಗೆ ನಾನು ಜವಾಹರಲಾಲ್ ವಿಶ್ವವಿದ್ಯಾಲಯದಲ್ಲಿ ಅಲ್ಲಿನ ಕನ್ನಡ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಆಯೋಜಿಸಿದ್ದ 'ತುಳಸೀದಾಸರು ರಚಿಸಿದ ರಾಮಾಯಣ'ದ ಭಾಷಾಂತರದ ಬಗ್ಗೆ ಡಾ. ಫಿಲಿಪ್ ಅವರ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ತುಳಸಿ ರಾಮಾಯಣಕ್ಕೆ ಸಂಬಂಧಿಸಿದಂತೆ ರಾಮಾಯಣ ಕತೆಯನ್ನು ಭಾರತದ ಬೇರೆ ಬೇರೆ ಭಾಷೆಗಳ ಕವಿಗಳು ಹಾಗೆಯೇ ರಾಮಾಯಣ ಇಂಗ್ಲೀಷಿನ ಭಾಷಾಂತರಗಳ ಬಗ್ಗೆ ಮಾತನಾಡಿದ ಡಾ. ಫಿಲಿಪ್ಸ್ ಅವರು ಎಲ್ಲಿಯೂ ಕೂಡ ಕನ್ನಡದಲ್ಲಿ 11ನೇ ಶತಮಾನದಲ್ಲಿ ನಾಗಚಂದ್ರ ಕವಿ ರಚಿಸಿದ ರಾಮಾಯಣವನ್ನು ಉಲ್ಲೇಖಿಸಲಿಲ್ಲ. ಉಪನ್ಯಾಸ ಕಾರ್ಯಕ್ರಮದ ನಂತರ ಖಾಸಗಿಯಾಗಿ ಮಾತನಾಡುತ್ತ "ಕನ್ನಡದ ಕೃತಿಗಳು ಇಂಗ್ಲಿಷ್ ಮತ್ತಿತರ ಭಾಷೆಗಳಿಗೆ ಭಾಷಾಂತರಗೊಳ್ಳದಿರುವುದೇ ಇದಕ್ಕೆ ಕಾರಣ" ಎಂದು ಡಾ.ಬಿಳಿಮಲೆಯವರು ಹೇಳಿದ್ದನ್ನು ನೆನಪಿಸಿಕೊಂಡಾಗಲೆಲ್ಲ ಕೈಲಾದಷ್ಟು ಮಟ್ಟಿಗೆ ನಾವು ನಮಗೆ ತಿಳಿದಿರುವ ಕೃತಿಗಳ, ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳನ್ನು ಭಾಷಾಂತರಿಸಬೇಕೆಂಬ ಭಾವನೆ ನನ್ನಲ್ಲಿ ಬಂದು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿದ್ದೇನೆ. ನನ್ನ ಊರು ರಾಮನಗರ ಜಿಲ್ಲೆ ಕನಕಪುರ ತಾಲೂಕಿನಲ್ಲಿದೆ. ಹಾಗಾಗಿ ಕನಕಪುರದ ಸಾಂಸ್ಕೃತಿಕ ಸಂಗತಿಯೊಂದರ ಕುರಿತ ಭಾಷಾಂತರದಲ್ಲಿ ತೊಡಗಿದ್ದೇನೆ.

ಕನ್ನಡ ನಾಡಿನ ಬಹುತೇಕ ಜಿಲ್ಲೆಗಳ ಜನರು ರಾಷ್ಟ್ರ ರಾಜಧಾನಿ ದೆಹಲಿ ಮತ್ತು ನೆರೆಹೊರೆಯ ನಗರಗಳಲ್ಲಿ ವಾಸಿಸುತ್ತಿದ್ದಾರೆ. ಒಂದೊಂದು ಜಿಲ್ಲೆಯಲ್ಲಿಯೂ ಇನ್ನೂ ಕೂಡ ಬೆಳಕಿಗೆ ಬಾರದ, ದಾಖಲಾಗದ, ಸಂಗತಿಗಳು ಅದೆಷ್ಟೋ ಇರುತ್ತವೆಂಬುದರಲ್ಲಿ ಸಂಶಯವೇನೂ ಇಲ್ಲ. ಏಕೆಂದರೆ ನಮ್ಮ ಯಾವುದೇ ಸರ್ಕಾರಗಳು ಅಥವಾ ವಿಶ್ವ ವಿದ್ಯಾಲಯಗಳು ಕೂಡ ಸಮಗ್ರವಾಗಿ ಇಡೀ ದೇಶದ ನಾಡಿನ ರಾಜಕೀಯ, ಸಾಂಸ್ಕೃತಿಕ ಚರಿತ್ರೆಯನ್ನು ದಾಖಲೀಕರಣಗೊಳಿಸುವ ಪ್ರಯತ್ನ ಮಾಡಲಿಲ್ಲ ಎಂಬುದಕ್ಕೆ ಇಂದಿಗೂ ದಿನಪತ್ರಿಕೆ, ಹಾಗೂ ಮತ್ತಿತರ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತಿರುವ ಸಂಗತಿಗಳೇ ನಿದರ್ಶನ. ಒಂದು ವೇಳೆ ಅವುಗಳನ್ನು ದಾಖಲಿಸಿದ್ದರೂ ಅವುಗಳನ್ನು ಕನ್ನಡದಿಂದ ಇಂಗ್ಲಿಷ್ ಮತ್ತಿತರ ಭಾಷೆಗಳಿಗೆ ಅನುವಾದಿಸುವ ಕೆಲಸ ಆಗಲೆಲ್ಲ. ಈ ಹಿನ್ನೆಲೆಯಲ್ಲಿ ಹೊರನಾಡ ಕನ್ನಡಿಗರು ತಮ್ಮ ಊರಿನ, ತಾಲ್ಲೋಕಿನ, ಜಿಲ್ಲೆಯ ಧಾರ್ಮಿಕ, ಸಾಂಸ್ಕೃತಿಕ, ಕಲೆ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದಲ್ಲಿ ಕನ್ನಡ ಭಾಷೆಯನ್ನು ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗುವುದರ ಜೊತೆಗೆ ಕನ್ನಡೇತರರಿಗೂ ಕೂಡ ನಮ್ಮ ಭಾಷೆಯ ಸತ್ವವನ್ನು ಮನವರಿಕೆ ಮಾಡಿಕೊಟ್ಟಂತಾಗುತ್ತದೆ.

ದೆಹಲಿ ಕನ್ನಡಿಗರು ಇಂತಹ ಪ್ರಯತ್ನದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಆಸಕ್ತಿ ತೋರಿದರೆ ಹತ್ತು ಹಲವು ವಿಷಯಗಳು ನಮ್ಮ ಸುತ್ತ ಮುತ್ತಲಲ್ಲೇ ಸಿಗುತ್ತವೆ. ಉದಾಹರಣೆಗೆ ದೆಹಲಿ ಕರ್ನಾಟಕ ಸಂಘ ಹಮ್ಮಿಕೊಳ್ಳಲಿರುವ "ಕರ್ನಾಟಕದ ವಿವಿಧ ಜಿಲ್ಲೆಗಳ ಆಹಾರ ಪ್ರದರ್ಶನ"ದಲ್ಲಿ ತಯಾರಾಗುವ ವಿವಿಧ ಭಕ್ಷ್ಯ ಭೋಜನಗಳ ಬಗ್ಗೆ ದಾಖಲೆ ಮಾಡಿ, ಈ ಪಾಕಶಾಸ್ತ್ರ ಸಾಹಿತ್ಯವನ್ನು ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಿಗೆ ಭಾಷಾಂತರ ಮಾಡಿದರೆ ಅದೂ ಕೂಡ ಕನ್ನಡ ಕಟ್ಟುವಲ್ಲಿ ಒಂದು ಒಳ್ಳೆಯ ಪ್ರಯತ್ನವೆಂದೇ ಹೇಳಬಹುದು.

ಇನ್ನೂ ಕನ್ನಡದ ಉಳಿವು ಬೆಳೆವಣಿಗೆಗೆ ಸಾಕಷ್ಟು ಶ್ರಮಿಸುತ್ತಿರುವ ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಎಲ್ಲ ಜಿಲ್ಲೆಗಳ ವೈವಿಧ್ಯಮಯ ಸಂಸ್ಕೃತಿ, ಸಾಹಿತ್ಯ, ಕಲೆ ಇತ್ಯಾದಿಗಳನ್ನು ಕುರಿತಂತೆ ಬರವಣಿಗೆ ಮಾಡಲು ಮತ್ತು ಅವುಗಳನ್ನು ದೇಶದ ಇತರೆ ಭಾಷೆಗಳಿಗೆ ಭಾಷಾಂತರಿಸಿ ಕನ್ನಡ ಮತ್ತು ಕನ್ನಡೇತರ ಜನರ ಹೃನ್ಮನಗಳನ್ನು ಜೋಡಿಸುವ ಕೈಂಕರ್ಯದಲ್ಲಿ ದೆಹಲಿ ಕನ್ನಡಿಗರನ್ನು ಪ್ರೇರೇಪಿಸುವಂತಹ ಕೆಲಸ ಮಾಡುತ್ತದೆಂದು ಭಾವಿಸೋಣ. ಅ

*ಚಂದ್ರಶೇಖರ ಎನ್.ಪಿ.*

# ಬೆಂಗಳೂರು ರೂಪಾಂತರ ತಂಡದಿಂದ ನಾಟಕ ಚಕ್ರರತ್ನ

2016 ಹೊಸ ವರ್ಷ ಜನವರಿ ತಿಂಗಳಿನಲ್ಲಿ ದೆಹಲಿ ಕರ್ನಾಟಕ ಸಂಘದ ಸದಸ್ಯರು ನಾಲ್ಕು ನಾಟಕಗಳನ್ನು ಕಂಡರು. ಸ್ಥಳೀಯ ಕಲಾವಿದರ **'ದಿನಕರ'** ತಂಡದಿಂದ ಎರಡು ನಾಟಕಗಳಾದರೆ, **ಮೈಸೂರಿನ ಪರಸ್ಪರ ಆರ್ಟ್ ಫೌಂಡೇಶನ್**ನವರ ಮತ್ತು **ರೂಪಾಂತರ ಬೆಂಗಳೂರು** ತಂಡದಿಂದ ತಲಾ ಒಂದೊಂದು ನಾಟಕ ಪ್ರದರ್ಶನಗೊಂಡಿತು.

ಬೆಂಗಳೂರು ರೂಪಾಂತರ ತಂಡ ಇದೇ ಜನವರಿ 24ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಿದ 'ಚಕ್ರರತ್ನ' ನಾಟಕ ಹತ್ತನೇ ಶತಮಾನದ ಆದಿಕವಿ ಪಂಪನ ಆದಿ ಪುರಾಣದಿಂದ ಆಯ್ದ ಕಥೆಯಾಗಿದ್ದು ಇಂದಿನ ಸ್ವಾರ್ಥ, ಹಿಂಸೆ ಮತ್ತು ಯುದ್ಧ ಭೀತಿಯಿಂದ ಕೂಡಿರುವ ಜಗತ್ತಿಗೆ ಒಂದು ಶಾಂತಿಯ ಸಂದೇಶವನ್ನು ಸಾರುವ ಉತ್ತಮ ಗುಣಮಟ್ಟದ ವಸ್ತುವನ್ನೊಳಗೊಂಡಿತ್ತು. ಬಾಹುಬಲಿ ತನ್ನ ಅಣ್ಣನೊಡನೆ ಸೆಣಸಿ ಗೆದ್ದ ಬಳಿಕ ಎಲ್ಲವನ್ನೂ ಬಿಟ್ಟು ಅಡವಿ ಸೇರಿ ಯುದ್ಧದಲ್ಲಿ ಗಾಯಗೊಂಡು ಬಳಲುತ್ತಿರುವ ಸೈನಿಕರುಗಳ ಗಾಯವನ್ನು ಹೊಲಿದು ಶುಶ್ರೂಷೆ ಮಾಡುವ ಒಬ್ಬ ಚಪ್ಪಲಿ ಹೊಲಿಯುವ ಸಮಗಾರನಾಗಿ ಕಾಣುವುದು, ಬಾಹುಬಲಿ ಮತ್ತು ಅವನ ಅಣ್ಣ ಭರತ ಇಬ್ಬರಿಂದಲೂ ದೂರಾದ ಅವರ ತಂದೆ ಆದಿದೇವ ದೊರೆ ಕಾಡಿನಲ್ಲಿ ಜೈನ ಮುನಿಯಾಗಿ ನಿಂತಿರುವುದು. ಸದಾ ತನ್ನ ಸಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಭರತನ ಆಯುಧ ಕೋಣೆಯಲ್ಲಿ ಅದೊಂದು ದಿನ ಇದ್ದಕ್ಕಿದ್ದಂತೆ 'ಚಕ್ರರತ್ನ'ವೆಂಬ ಅತ್ಯಮೋಘವಾದ ಮಿಂಚುವ ಆಯುಧವೊಂದು ಬಂದು ಸೇರಿಕೊಳ್ಳುವುದು ಆತನ ಮಹತ್ವಾಂಕ್ಷೆಯನ್ನು ಅದು ಇನ್ನಷ್ಟು ಹೆಚ್ಚಿಸಿ ಅವನಿಂದ ಯುದ್ಧಗಳನ್ನು ಮಾಡಿಸಿ ಹಿಂಸೆ, ಸಾವು, ನೋವನ್ನು ಉಂಟು ಮಾಡುವುದು. ಭರತ–ಬಾಹುಬಲಿ ರಾಜರಾಗುವ ಮುನ್ನ ಅಣ್ಣ–ತಮ್ಮಂದಿರಾಗಿದ್ದವರು. ಅಧಿಕಾರದ ಮದದಲ್ಲಿ ಹಗೆಗಳಾಗಿ ಮಾರ್ಪಟ್ಟು, ಯುದ್ಧದಲ್ಲಿ ಭರತ ತಮ್ಮನಿಂದ ಸೋಲನ್ನನುಭವಿಸುತ್ತಾನೆ. ಬಾಹುಬಲಿ ಎಲ್ಲವನ್ನೂ ಗೆದ್ದು, ಸರ್ವಸ್ವವನ್ನು ತೊರೆದು, 'ಮಹಾವೀರ'ನಾಗುವ ಸನ್ನಿವೇಶವನ್ನು ಈ ನಾಟಕ ಅತ್ಯಂತ ಮಾರ್ಮಿಕವಾಗಿ ಪ್ರದರ್ಶಿಸಿತು. ಡಾ. ಕೆ.ವೈ. ನಾರಾಯಣ ಸ್ವಾಮಿ ಅವರು ರಚಿಸಿರುವ ನಾಟಕಕ್ಕೆ ನಾರಾಯಣ ರಾಯಚೂರು ಅವರು ಅಷ್ಟೇ ಸುಮಧುರ ಮತ್ತು ಸುಸಂದರ್ಭಿಕವಾದ ಸಂಗೀತ ನೀಡಿದ್ದಾರೆ. ಕನ್ನಡ ರಂಗಭೂಮಿಯನ್ನು ಜೀವಂತವಾಗಿಡಲು ನಿರಂತರವಾಗಿ ಶ್ರಮಿಸುತ್ತಿರುವ ರೂಪಾಂತರ ತಂಡದ ಬೆನ್ನೆಲುಬೇ ಆಗಿರುವ ಕ್ರಿಯಾಶೀಲ ನಿರ್ದೇಶಕ ಕೆ.ಎಸ್.ಡಿ.ಎಲ್. ಚಂದ್ರು ಅವರು ಬಹಳ ಅಚ್ಚುಕಟ್ಟಾಗಿ ನಿರ್ದೇಶಿಸಿದ್ದಾರೆ.

ಚಮ್ಮಾರ ಮತ್ತು ಬಾಹುಬಲಿಯಾಗಿ–ರಾಮಚಂದ್ರ, ಚಾವುಂಡರಾಯ ಮತ್ತು ಭರತನಾಗಿ–ಹರೀಶ್, ಚಕ್ರರತ್ನನಾಗಿ–ಸಿತಾರ, ಅರಿಷ್ಟನೇಮಿಯಾಗಿ–ವೇಣು, ಯಶೋಮತಿ ಮತ್ತು ಸುಮತಿಯಾಗಿ–ಆಶಾರಾಣಿ ಹಾಗೂ ಸ್ನೇಹಾ ಶರ್ಮಾರವರು ಉತ್ತಮ ಅಭಿನಯ ನೀಡಿದರು. ಇನ್ನುಳಿದಂತೆ ಎಲ್ಲ ನಟ ನಟಿಯರು ತಮ್ಮ ತಮ್ಮ ಪಾತ್ರಕ್ಕೆ ಜೀವತುಂಬಿ ನಾಟಕದ ಒಟ್ಟು ಯಶಸ್ಸಿಗೆ ಕಾರಣೀಭೂತರಾದರು. ನಾಟಕದುದ್ದಕ್ಕೂ ಬಳಸಿಕೊಂಡ ತಂತ್ರಗಳು, ಬೆಳಕು, ರಂಗ ಪರಿಕರಗಳು, ಸ್ಥಿರ ಚಿತ್ರಗಳು ಹಿನ್ನೆಲೆ ಗಾಯನ, ರಂಗವಿನ್ಯಾಸ ಮತ್ತು ವಸ್ತ್ರವಿನ್ಯಾಸ, ಕಲೆ ಎಲ್ಲವೂ ಅತ್ಯಂತ ಅರ್ಥಗರ್ಭಿತವಾಗಿತ್ತು. ಕೊರೆಯುವ ಚಳಿಯಲ್ಲೂ ದೆಹಲಿಯ ಕನ್ನಡಿಗರು ಈ ಗಂಭೀರ ನಾಟಕವನ್ನು ವೀಕ್ಷಿಸಿ ಸಂತೋಷಪಟ್ಟರು.

ನಾಟಕದ ನಂತರ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡುತ್ತ ಹತ್ತನೇ ಶತಮಾನದ ಪಂಪ ಮಹಾಕವಿಯ ಈ ಅದ್ಭುತ ಕೃತಿಯನ್ನು ನಾಟಕ ರೂಪಕ್ಕೆ ತಂದು ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಸ್ತುತಪಡಿಸಿದ ರೂಪಾಂತರ ತಂಡದವರನ್ನು ಮತ್ತು ನಾಟಕದ ಕರ್ತೃ ಕೆ.ವೈ. ನಾರಾಯಣ ಸ್ವಾಮಿ ಅವರನ್ನು ಪ್ರಶಂಶಿಸಿದರು. ಆದಿಕವಿ ಪಂಪನ ಕಠಿಣವಾದ ಆದಿಪುರಾಣದ ವಸ್ತುವನ್ನು ಆಧಾರವಾಗಿಟ್ಟುಕೊಂಡು ಇಂದಿನ ಜನಾಂಗೆಕ್ಕೆ ಅತ್ಯಂತ ಅಗತ್ಯವಾದ ವಿಶ್ವಶಾಂತಿಯ ಸಂದೇಶವನ್ನು ಮನಮುಟ್ಟುವ ರೀತಿಯಲ್ಲಿ ಸರಳ ಭಾಷೆ ಮತ್ತು ಸುಂದರ ಶೈಲಿಯಲ್ಲಿ ಈ ನಾಟಕವನ್ನು ರೂಪಾಂತರ ತಂಡ ದೆಹಲಿ ಕನ್ನಡಿಗರಿಗೆ ಪ್ರಸ್ತುತಪಡಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ಅ

*ಸಖಾರಾಮ ಉಪ್ಪೂರು*











# ಮೈಸೂರಿನ ಪರಸ್ಪರ ಆರ್ಟ್ ಫೌಂಡೇಶನ್‌ನಿಂದ ನಾಟಕ ಮತ್ತು ಕಂಸಾಳೆ

ಖ್ಯಾತ ರಂಗಕರ್ಮಿ ಮೈಸೂರು ರಂಗಾಯಣದ ಶ್ರೀ ಮಂಜುನಾಥ ಬೆಳಕೆರೆಯವರ ನೇತೃತ್ವದಲ್ಲಿ ಮೈಸೂರಿನ ಪರಸ್ಪರ ಆರ್ಟ್ ಫೌಂಡೇಶನ್ ಅವರು ಇದೇ ಜನವರಿ 16ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಮಹಾಭಾರತದ ಒಂದು ಸಣ್ಣ ಘಟನೆಯನ್ನು ಆಧರಿಸಿದ 'ಮಧ್ಯಮ ವ್ಯಾಯೋಗ' ಎಂಬ ವಿನೂತನವಾದ ನಾಟಕವನ್ನು ಬಹಳ ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ಪ್ರಾಥಮಿಕ ಮೂಡಲಪಾಯ ಹೆಜ್ಜೆಗಳಿಗೆ ಅಣುಗೊಳಿಸಿ ಯಕ್ಷಗಾನ ಹಾಗೂ ನಾಟಕಗಳೆರಡರ ಸಮ್ಮಿಶ್ರಣ ತಂತ್ರವನ್ನು ಈ ನಾಟಕದಲ್ಲಿ ನಿರ್ದೇಶಕ ಮಂಜುನಾಥ ಬೆಳಕೆರೆಯವರು ಬಹಳ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಘಟೋತ್ಕಜ, ಭೀಮ ಹಾಗೂ ಹಿಡಿಂಬೆಯರು ಮೂಡಲಪಾಯ ಯಕ್ಷಗಾನದ ಮಾದರಿಯಲ್ಲಿ ವೇಷಭೂಷಣಗಳನ್ನು ತೊಟ್ಟು ಮಾಡಿದ ಕುಣಿತ ಹಾಗೂ ರಂಗ ಪರಿಕರಗಳು ಬಹಳ ಆಕರ್ಷಣೀಯವಾಗಿದ್ದವು.

ಇತ್ತೀಚೆಗಷ್ಟೇ ದೆಹಲಿ ಕರ್ನಾಟಕ ಸಂಘದ ಕರೆಗೆ ಓಗೊಟ್ಟು ಸ್ಥಳೀಯ ಕಲಾವಿದರನ್ನು ಒಂದುಗೂಡಿಸಿ 'ಸೇವಂತಿ ಪ್ರಸಂಗ' ಎಂಬ ನಾಟಕವನ್ನು ಸಿದ್ಧಪಡಿಸಿ, ನಿರ್ದೇಶಿಸಿ, ದೆಹಲಿಯಲ್ಲಷ್ಟೇ ಅಲ್ಲದೆ ಮೈಸೂರಿನ ರಂಗಾಯಣ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲೂ ಯಶಸ್ವಿಯಾಗಿ ಪ್ರಸ್ತುತಪಡಿಸಿರುವ ಕೀರ್ತಿ ಶ್ರೀ ಮಂಜುನಾಥ ಬೆಳಕೆರೆಯವರಿಗೆ ಸಲ್ಲುತ್ತದೆ. ನ್ಯಾಷನಲ್ ಬುಕ್ ಟ್ರಸ್ಟ್‌ನವರು ದೆಹಲಿಯ ಸುಪ್ರಸಿದ್ಧ ಪ್ರಗತಿ ಮೈದಾನದಲ್ಲಿ ನಡೆಸಿದ ನಾಲ್ಕು ದಿನಗಳ ರಾಷ್ಟ್ರೀಯ ಪುಸ್ತಕ ಮೇಳದಲ್ಲಿ ವಿಶೇಷ ಆಹ್ವಾನಿತರಾಗಿ ಕರ್ನಾಟಕದಿಂದ ಬಂದಿರುವ ಪರಸ್ಪರ ಆರ್ಟ್ ಫೌಂಡೇಶನ್ ತಂಡ ಜನವರಿ 17ರಂದು ಪ್ರಗತಿ ಮೈದಾನದಲ್ಲಿ ಈ ನಾಟಕ ಮತ್ತು ಕಂಸಾಳೆ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಕನ್ನಡೇತರರು ಸಹ ಮೆಚ್ಚಿಕೊಳ್ಳುವಂತೆ ಪ್ರದರ್ಶಿಸಿತು. ಮೈಸೂರಿನ ಸುಪ್ರಸಿದ್ಧ ಕಂಸಾಳೆ ಮಾದೇವಯ್ಯನವರ ಸುಪುತ್ರರಾದ ಕಂಸಾಳೆ ಕುಮಾರಸ್ವಾಮಿಯವರ ನಿರ್ದೇಶನದಲ್ಲಿ ಇದೇ ತಂಡದ ಸುಮಾರು 15 ಮಂದಿ ಕಲಾವಿದರು ಬಹಳ ಪರಿಣಾಮಕಾರಿಯಾದ ಕಂಸಾಳೆ ನೃತ್ಯವನ್ನು ಪ್ರಸ್ತುತಪಡಿಸಿದರು. ಕುಮಾರಸ್ವಾಮಿಯವರ ಸುಶ್ರಾವ್ಯ ಕಂಠದಿಂದ ಹೊರಬಂದ ಮೈಸೂರು ಪ್ರಾಂತ್ಯದ ಪರಂಪರೆಯ ಕಂಸಾಳೆಯ ಹಾಡುಗಳು ಕರ್ನಾಟಕ ಸಂಘದ ಸಭಾಭವನದ ತುಂಬೆಲ್ಲಾ ಗುಣುಗುಟ್ಟಿದವು. ಜೊತೆಗೆ ನಾಟಕ ಮತ್ತು ಕಂಸಾಳೆ ನೃತ್ಯದ ನಡುವೆ ಕುಮಾರಸ್ವಾಮಿಯವರು ಹಾಡಿದ ಹರಿಕಥಾ ಪ್ರಸಂಗ ಕೂಡಾ ನೆರೆದಿದ್ದ ಜನರಿಗೆ ಮುದನೀಡಿದವು. ಒಟ್ಟಿನಲ್ಲಿ ಮಂಜುನಾಥ ಬೆಳಕೆರೆಯವರ ನಾಟಕ, ನೃತ್ಯ, ಕಲೆ, ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಈ ಪರಸ್ಪರ ಆರ್ಟ್ ಫೌಂಡೇಶನ್ ಒಂದು ಅರ್ಥಗರ್ಭಿತ ಕೊಡುಗೆ.

***ಅಭಿಮತ ವರದಿ***





# ದೆಹಲಿ ಕನ್ನಡಿಗರಿಂದ ಹಸ್ತಿನಾಪುರಕ್ಕೆ ದಾಳಿ

ದೆಹಲಿ ಕನ್ನಡಿಗರು ಜನವರಿ 31, 2016ರ ಭಾನುವಾರದಂದು ಉತ್ತರ ಪ್ರದೇಶದ ಮೀರತ್ ಜಿಲ್ಲೆಯ ಸಮೀಪವಿರುವ ಹಸ್ತಿನಾಪುರಕ್ಕೆ ದಾಳಿ ಮಾಡಿದರು. ಪುಟಾಣಿಗಳು, ವಯೋವೃದ್ಧರು, ಮಹಿಳೆಯರು, ಯುವಕರು, ಎಳೆ ವಯಸ್ಕರು ಹೀಗೆ ಎಲ್ಲಾ ವಯಸ್ಸಿಗೆ ಸೇರಿದ ಕರ್ನಾಟಕದ ಮೂಲೆ ಮೂಲೆಗಳಿಂದ ಬಂದು ದೆಹಲಿಯಲ್ಲಿ ನೆಲೆಸಿರುವ 700 ಮಂದಿ ಕನ್ನಡಿಗರು ಮುಂಜಾವಿನ ಚಳಿಯಲ್ಲಿ ಮಫ್ಲರ್, ಟೋಪಿ, ಸ್ವೆಟರ್, ಕೋಟು, ಸಾಕ್ಸ್, ಗ್ಲೌಸ್ ತೊಟ್ಟು ಸನ್ನದ್ಧರಾಗಿ ಸುಮಾರು 15 ಹವಾನಿಯಂತ್ರಿತ ರಥಗಳನ್ನೇರಿ (ಬಸ್ಸು) ಬೆಳಿಗ್ಗೆ 6.30ಗಂಟೆಗೆ ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಭವನದ ಸಿಬ್ಬಂದಿಗಳ ವಸತಿ ಗೃಹ, ಆರ್.ಕೆ.ಪುರಂ, ಜನಕಪುರಿ, ಗುರ್‌ಗಾಂವ್, ಅಶೋಕ್ ವಿಹಾರ್, ನೋಯ್ಡಾ (ಜೆ.ಎಸ್.ಎಸ್.), ಫರಿದಾಬಾದ್, ಲೋಧಿ ಕಾಲೋನಿ, ರೋಹಿಣಿ, ಹೀಗೆ ದೆಹಲಿ ಹತ್ತು ಹಲವು ಸ್ಥಳಗಳಿಂದ ಹೊರಟು ಮಧ್ಯೆ ಘಾಜಿಯಾಬಾದ್‌ನ ಮಾರ್ಗದಲ್ಲಿ ಮೋಹನ್ ನಗರದ ಡ್ರಿಜ್ಲಿಲಿಂಗ್ ಲ್ಯಾಂಡ್‌ನಲ್ಲಿ ಬಿಸಿಬಿಸಿಯಾದ ಸೇವಿಗೆ ಉಪ್ಪಿಟ್ಟು, ಬಟಾಟೆ ವಡೆ, ಪಕೋಡ ತಿಂದು, ಚಾ, ಕಾಫಿ ಕುಡಿದು ಮತ್ತೆ ಬಸ್ಸೇರುವ ಮೊದಲು ಹಣ್ಣು, ಜ್ಯೂಸ್, ಕೇಕ್, ಚಿಪ್ಸ್, ಚಾಕಲೇಟು, ನೀರಿನ ಬಾಟಲ್ ಒಳಗೊಂಡ ಒಂದೊಂದು ಪ್ಯಾಕೇಟಿನೊಂದಿಗೆ ಮುನ್ನಡೆದರು. ಮಧ್ಯಾಹ್ನ ಸರಿ ಸುಮಾರು 11.00ಗಂಟೆಯ ಹೊತ್ತಿಗೆ ಹಸ್ತಿನಾಪುರ ತಲುಪಿದ ಈ ಕನ್ನಡಿಗರ ದಂಡು ಅಲ್ಲಿ ಜಂಬೂ ದ್ವೀಪ, ಮೂರು ಲೋಕ, ಸುಮೇರು ಪರ್ವತ ಸ್ಥಂಬ, ಹಾಗೂ ನಾಲ್ಕಾರು ಬೃಹದಾಕಾರದ ಅತ್ಯಂತ ಸುಂದರವಾದ ಜೈನ ಮಂದಿರಗಳು, ದಿಗಂಬರ ಜೈನ ಮುನಿಗಳನ್ನು ನೋಡಿದಾಗ ಹಸ್ತಿನಾಪುರವು ಪಾಂಡವರು ಕೌರವರ ನಾಡಾಗಿತ್ತಾದರೂ ಈಗ ಅವರ ಯಾವುದೇ ಅವಶೇಷಗಳು ಕಾಣದಂತೆ ಎಲ್ಲವೂ ಜೈನಮಯವಾಗಿ ಕಂಡಿತು. ಯಾಕೆ ಹೀಗೆ ಎಂಬ ಪ್ರಶ್ನೆಗೆ ಯಾರಲ್ಲೂ ಉತ್ತರ ದೊರೆಯಲಿಲ್ಲ. ದೋಣಿ ಸವಾರಿ, ಜಂಬೂ ಸವಾರಿ, ಕೊಲಂಬಸ್, ಮಕ್ಕಳ ರೈಲು, ಉಯ್ಯಾಲೆ ಇನ್ನಿತರ ಸೌಲಭ್ಯಗಳನ್ನು ಸವಿಯುತ್ತಾ ಜಂಬೂ ದ್ವೀಪದ ಸುಮೇರು ಪರ್ವತ ಸ್ಥಂಬದ ಮುಂಭಾಗದಲ್ಲಿ 700 ಜನ ಕನ್ನಡಿಗರು ಒಂದೇ ಜಾಗದಲ್ಲಿ ಸೇರಿ ಒಂದು ಫೋಟೋ ತೆಗೆದುಕೊಳ್ಳಬೇಕೆಂದು ಮಾಡಿದ ಪ್ರಯತ್ನ ಅತ್ಯಾಕರ್ಷಕವಾಗಿತ್ತು. 700ಜನ ಕನ್ನಡದಲ್ಲಿ ಗಲಗಲವೆಂದು ಮಾತನಾಡುತ್ತಿರುವಾಗ ಆ ಹಸ್ತಿನಾಪುರದಲ್ಲಿ, ಜಂಬೂದ್ವೀಪದಲ್ಲಿ ಉಳಿದವರಿಗೆಲ್ಲಾ ಏನೋ ಒಂದು ರೀತಿಯ ಆಶ್ಚರ್ಯ, ಗಾಬರಿ. ಕನ್ನಡಿಗರಿಗಾದ ನಮ್ಮ ಪಾಲಿಗಂತೂ ನಾವು ಕರ್ನಾಟಕದ ಬೆಂಗಳೂರೋ, ಮೈಸೂರೋ, ಮಂಗಳೂರೋ, ಧಾರವಾಡವೋ, ಬೀದರೋ ಅಲ್ಲ ಶಿವಮೊಗ್ಗ, ಕೋಲಾರದಲ್ಲಿರುವೆವೋ ಎಂಬಂತೆ ಭಾಸವಾಗುತ್ತಿತ್ತು.

ಒಂದೆರಡು ಬಸ್ಸುಗಳು ದಾರಿ ತಪ್ಪಿ ಯಾವುದೋ ಹಳ್ಳಿಯಲ್ಲಿ ನುಗ್ಗಿ ಆ ಹಳ್ಳಿಯ ಅತ್ಯಂತ ಕಿರಿದಾದ ರಸ್ತೆಗಳಲ್ಲಿ ಸಿಕ್ಕಿಕೊಂಡಾಗ ಬಸ್ಸಿನಲ್ಲಿದ್ದವರೊಬ್ಬರು ಹಸ್ತಿನಾಪುರಕ್ಕೆ ಹೋಗುವ ಮುನ್ನ ನಾವು ಕಿಷ್ಕಿಂಧೆಯನ್ನು ಹಾದು ಹೋಗುತ್ತಿದ್ದೇವೆಯೋ ಎಂದು ಉದ್ಗಾರ ತೆಗೆದರು. ಅದಕ್ಕೆ ಉತ್ತರವೋ ಎಂಬಂತೆ, ಇನ್ನೊಬ್ಬರು ಹಾಗಲ್ಲ ಹಸ್ತಿನಾಪುರಕ್ಕೆ ಹೋಗುವ ಮುನ್ನ ನಾವು ಪಾಂಡವರಂತೆ ವನವಾಸಪಟ್ಟು ಹೋಗುತ್ತಿದ್ದೇವೆ ಎಂದಾಗ ನಗೆಬುಗ್ಗೆ ಚಿಮ್ಮಿತ್ತು. ತಿಂದ ಉಪ್ಪಿಟ್ಟಿನ ಬಲವೋ ಅಥವಾ ಆ ತಾಂಬೂಲದ ತೊಟ್ಟೆಯಲ್ಲಿದ್ದ ಹಣ್ಣು, ಜ್ಯೂಸಿನ ಫಲವೋ ಪ್ರತಿ ಬಸ್ಸಿನಲ್ಲೂ ಅಂತಾಕ್ಷರಿ, ಒಗಟು, ಹಾಡು, ಹಾಸ್ಯ ಚಟಾಕಿಗಳು ಬಸ್ಸಲ್ಲಿದ್ದ ಎಲ್ಲರನ್ನೂ ತನ್ಮಯಗೊಳಿಸಿತು. ಮಧ್ಯಾಹ್ನದ ಊಟ ಮುಗಿದ ನಂತರ ಅಲ್ಲೇ ಸಮೀಪದಲ್ಲಿದ್ದ ಪಾಂಡವರೇ ಪ್ರತಿಷ್ಠಿಸಿ ಪೂಜಿಸಿದರೆನ್ನಲಾದ ಶೇಷರೂಪಿ ರುದ್ರನ ದೇವಾಲಯಕ್ಕೆ ಭೇಟಿ ನೀಡಿ ಬಳಿಯಲ್ಲಿದ್ದ ಭೀಮನ ಬಾವಿ ಸ್ವಲ್ಪ ಆಕಡೆ ದೂರದಲ್ಲಿದ್ದ ಕರ್ಣನ ದೇವಸ್ಥಾನ ಎಲ್ಲಕ್ಕೂ ಭೇಟಿ ನೀಡಿ ಸಂತೋಷದಿಂದ ದೆಹಲಿಯತ್ತ ವಾಪಸ್ಸು ಹೊರಟಾಗ ದಾರಿಯಲ್ಲಿ ಮವಾನ ಎಂಬ ಸ್ಥಳದಲ್ಲಿ ಬೆಲ್ಲದ ಗಾಣ ನೋಡಿ ಬಸ್ಸು ನಿಲ್ಲಿಸಿ ಕೊತ ಕೊತ ಕುದಿಯುತ್ತಿದ್ದ ಬಿಸಿಬೆಲ್ಲ, ಕಬ್ಬು ಸವಿದು ಮತ್ತೆ ಬೆಳಿಗ್ಗೆ ತಿಂಡಿ ತಿಂದ ಡ್ರಿಜ್ಲಿಲಿಂಗ್ ಲ್ಯಾಂಡ್‌ಗೆ ಬಂದು ರಾತ್ರಿಯ ಭೋಜನಕ್ಕೆ ಅಣಿಯಾದೆವು. ಮಧ್ಯಾಹ್ನದ ಊಟದಲ್ಲಿ ಬರೆ ಬಿಸಿಬೇಳೆ ಬಾತು ಮತ್ತು ತುಪ್ಪದನ್ನ, ಜೊತೆಗೆ ಮೊಸರು ಬಜ್ಜಿ ಹಾಗೊ ಉಪ್ಪಿನಕಾಯಿ ಅಷ್ಟೇ ಇದ್ದರೆ, ರಾತ್ರಿ ಊಟ ಬಾರಿ ಭರ್ಜರಿಯಾಗಿತ್ತು. ಶಾಖಾಹಾರಿ ಮತ್ತು ಮಾಂಸಹಾರಿ ಎರಡೂ ತರದ ಊಟಗಳಿದ್ದವು. ಶಾಖಾಹಾರಿಗಳಿಗೆ ಒಳ್ಳೆಯ ಪನ್ನೀರಿನ ಪಲ್ಯವಾದರೆ ಮಾಂಸಾಹಾರಿಗಳಿಗೆ ಕೋಳಿಯ ತುಂಡು. ಮಧ್ಯಾಹ್ನದ ಊಟಕ್ಕೆ ಸಿಹಿ ಬಾಲುಶಾಹಿ ಆದರೆ ರಾತ್ರಿ ಒಳ್ಳೆಯ ಬಿಸಿ ಬಿಸಿ ಪಾಯಸ.

ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ 15 ಬಸ್ಸುಗಳು ಹಾಗೂ ಒಂದು ಇನ್ನೋವ ಕಾರಿನೊಂದಿಗೆ ದೆಹಲಿಯ ಕನ್ನಡಿಗರು ಪಿಕ್‌ನಿಕ್‌ಗೆ ಹೋಗಿದ್ದು ಇದೇ ಮೊದಲ ಬಾರಿ. 10–12 ವರ್ಷಗಳಷ್ಟು ಹಿಂದೆ ಎರಡು ಮೂರು ಬಸ್ಸುಗಳಲ್ಲಿ ಸಣ್ಣ ಪುಟ್ಟ ಪ್ರವಾಸಗಳನ್ನು ದೆಹಲಿ ಕರ್ನಾಟಕ ಸಂಘ ಕೈಗೊಂಡಿತ್ತಾದರೂ ಈ ಹಸ್ತಿನಾಪುರದ ಪ್ರವಾಸವಂತೂ 'ನಾ ಭೂತೋ, ನಾ ಭವಿಷ್ಯತೋ' ಎಂಬಂತೆ ಒಂದು ನಂಬಲಾರದಂತಹ ಅಚ್ಚರಿಯ ಘಟನೆಯಾಗಿತ್ತು. ಈ ಸಂಘಟನೆಯ ಹಿಂದೆ ಹಲವಾರು ವ್ಯಕ್ತಿಗಳ ಪರಿಶ್ರಮವಿತ್ತು. ಮುಖ್ಯವಾಗಿ ಸಂಘದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಜೊತೆಗೆ ಇನ್ನೂ 10–20 ಮಂದಿ ಸ್ವಯಂ ಸೇವಕರು ಮತ್ತು ಸಂಘದ ಸಿಬ್ಬಂದಿ ವರ್ಗ ಸುಮಾರು 15 ದಿನಗಳ ಕಾಲ ಸತತವಾಗಿ ದುಡಿದಿದ್ದರ ಫಲವೇ ಈ ಯಶಸ್ಸಿಗೆ ಕಾರಣವಾಗಿತ್ತು. ಒಂದೆರಡು ಬಸ್ಸುಗಳು ದಾರಿ ತಪ್ಪಿ ಸ್ವಲ್ಪ ತಡವಾಗಿ ಸೇರಿದ್ದು, ಮಧ್ಯಾಹ್ನದ ಊಟ ಕೂಡಾ ದಾರಿ ತಪ್ಪಿ ತಡವಾಗಿ ಬಂದದ್ದು, ಹೀಗೆ ಒಂದೆರಡು ಸಣ್ಣಪುಟ್ಟ ತೊಂದರೆಗಳ ಹೊರತಾಗಿ ಇಡೀ ಕಾರ್ಯಕ್ರಮ ಎಲ್ಲರ ಮನಸ್ಸಿನಲ್ಲಿ ಸದಾ ಅಚ್ಚಳಿಯದೇ ಉಳಿಯುವ ಒಂದು ಮಹತ್ವದ ಘಟನೆ ಇದಾಗಿತ್ತು. ಮರುದಿನ ಸೋಮವಾರ ಎಲ್ಲರಿಗೂ ಶಾಲೆ, ಕಾಲೇಜು, ಕಛೇರಿ, ವ್ಯಾಪಾರ ವೈಹಿವಾಟುಗಳು ಇದ್ದಾಗ್ಯೂ ರಾತ್ರಿ 11.00ಗಂಟೆಗೆ ಮರಳಿ ದೆಹಲಿ ಸೇರಿದಾಗ ಯಾರೊಬ್ಬರ ಮುಖದಲ್ಲೂ ಆಯಾಸವಾಗಲಿ, ಬೇಸರವಾಗಲಿ ಕಾಣಲಿಲ್ಲ. ಅ

*ಅಭಿಮತ ವರದಿ*



# ಪಿಕ್‌ನಿಕ್‌ನ ಕೆಲವು ರಸ ಕ್ಷಣಗಳು

ಸಾಹಿತ್ಯ ಲೋಕದಲ್ಲಿ ಪ್ರವಾಸಕಥನ ಒಂದು ವಿಭಿನ್ನ ಪ್ರಕಾರ, ಅದರಲ್ಲೂ ಕನ್ನಡ ಭಾಷೆಯಲ್ಲಿ ಪ್ರವಾಸ ಕಥನಗಳ ಸಂಖ್ಯೆ ಹೆಚ್ಚಾಗಲು ಒಂದು ಮುಖ್ಯ ಕಾರಣ ನಮ್ಮ ವಿಶ್ವವಿದ್ಯಾಲಯಗಳು, ಸಾಹಿತ್ಯ ಪರಿಷತ್ತು ಲೇಖಕರು ಪ್ರವಾಸ ಕೈಗೊಳ್ಳಲು ಅನುದಾನ ನೀಡಿ, ಅವರುಗಳಿಂದ ಅತ್ಯುತ್ತಮ ಪ್ರವಾಸ ಕಥನಗಳನ್ನು ಬರೆಸಿರುವುದು.

ದೆಹಲಿ ಕರ್ನಾಟಕ ಸಂಘವು ವರ್ಷದ ಮೊದಲ ತಿಂಗಳ ಕೊನೆಯ ದಿನ ಪ್ರಾಯೋಜಿಸಿದ ಹಸ್ತಿನಾಪುರ ಸಾಂಸ್ಕೃತಿಕ ಪ್ರವಾಸ ಬಹಳಷ್ಟು ಜನರನ್ನು ಪ್ರವಾಸ ಕಥನ ಬರೆಯಲು ಸ್ಫೂರ್ತಿ ನೀಡಬಹುದು. ಹದಿನೈದು ವರ್ಷಗಳಲ್ಲಿ ಕಟ್ಟಡ ನಿರ್ಮಾಣ, ನಿರ್ಮಾಣ ಸಾಲ, ಹಣಕಾಸಿನ ಕೊರತೆ ಮತ್ತಿತರ ಕಾರಣಗಳಿಂದ ಪ್ರವಾಸ ಕೈಗೊಂಡಿರಲಿಲ್ಲ. ಹಾಗಾಗಿ ಇಷ್ಟು ದೊಡ್ಡ ಮಟ್ಟದ ಪ್ರವಾಸವನ್ನು ಯಾವುದೇ ಸಮಿತಿ ಯಾವುದೇ ತೊಂದರೆ ಇಲ್ಲದೆ ಕ್ಷಿಪ್ರವಾಗಿ ಕೈಗೊಂಡ ಇಂದಿನ ಕಾರ್ಯಕಾರಿ ಸಮಿತಿ ಅಭಿನಂದನಾರ್ಹ.

ಪ್ರವಾಸ, ಪ್ರಯಾಸ, ಆಯಾಸ ಒಂದು ರೀತಿಯ ಜೋಡು ಪದಗಳನ್ನಾಗಿಸಬಹುದು. ಎಷ್ಟೇ ಪೂರ್ವಸಿದ್ಧತೆ ಮಾಡಿಕೊಂಡು ಮನೆಯವರ ಒಟ್ಟಿಗೆ ಪ್ರವಾಸ ಕೈಗೊಂಡರೂ ಪ್ರಯಾಣದ ಉದ್ದಕ್ಕೂ ಒಂದಲ್ಲ ಒಂದು ಕಾರಣಕ್ಕೆ ಪ್ರಯಾಸ ಆಗುವುದು ಖಂಡಿತ. ಪ್ರಯಾಣದ ನಂತರ ಆಯಾಸವಂತೂ ನಿಶ್ಚಿತ.

ಭಾನುವಾರ ಮುಂಜಾವಿನ ಚಳಿ ಪ್ರವಾಸದ ಬಸ್ಸನ್ನು ಹಿಡಿಯಲು ನಡೆಸಬೇಕಾಗಿದ್ದ ತಯಾರಿಗೆ ಯಾವ ರೀತಿಯಲ್ಲೂ ಅಡ್ಡಿ ಮಾಡಲಿಲ್ಲ. ನಿಶ್ಚಿತ ಸಮಯದಲ್ಲಿ ನಮ್ಮ ಜನಕಪುರಿ ಮಾರ್ಗದಲ್ಲಿ ನಿಂತಿದ್ದ ಬಸ್ಸನ್ನು ನಾವು ಹಿಡಿದೆವು. ಬಸ್ಸಿನಲ್ಲಿ ಪರಿಚಿತ ಹಾಗೂ ಅಪರಿಚಿತ ಮುಖಗಳನ್ನು ಕಂಡಾಗ ಪ್ರವಾಸ ಒಂದು ರೀತಿ ಮುಜುಗರವಾಗಿರಬಹುದೆನ್ನುವ ಮುನ್ಸೂಚನೆ ನೀಡಿತ್ತು. ಪ್ರಯಾಣದಲ್ಲಿ ಅಪರಿಚಿತರಿದ್ದರೆ ಅವರನ್ನು ಅರಿಯಲು ಮಾತನಾಡುತ್ತಿದ್ದರೆ ಸಮಯ ಕಳೆಯುವುದೇ ತಿಳಿಯುವುದಿಲ್ಲ. ಬೆಳಗ್ಗಿನ ಉಪಹಾರ ಸವಿಯಲು ನಾವು ಘಾಜಿಯಾಬಾದ್‌ನ ಡ್ರಿಜ್ಲಿಲಿಂಗ್ ಲ್ಯಾಂಡ್ ಸ್ಥಳವನ್ನು ಬಲು ಶೀಘ್ರವಾಗಿ ತಲುಪಿದೆವೇನೋ ಎಂಬಂತೆ ಬಸ್ಸಿನಲ್ಲಿ ಸಮಯ ಹೋದದ್ದೆ ತಿಳಿಯಲಿಲ್ಲ. ಸವಿಯಾದ ಲಘು ಉಪಾಹಾರ ಹಾಗೂ ಬುತ್ತಿ ಪೊಟ್ಟಣ ಮುಂದಿನ ಪ್ರಯಾಣ ಮೋಜನ್ನು ಅನುಭವಿಸಲು ಶಕ್ತಿ ನೀಡಿತು.

ಹಸ್ತಿನಾಪುರದೆಡೆಗೆ ನಮ್ಮ ಪ್ರಯಾಣ ಸಾಗುತ್ತಿದ್ದಂತೆ ಬಸ್ಸಿನ ಸಹ ಪ್ರಯಾಣಿಕರನ್ನು ತಮ್ಮ ಸ್ವಪರಿಚಯ ಮಾಡಿಕೊಳ್ಳುತ್ತ ಸಾಗಿದೆವು. ಪರಿಚಯದ ಮಧ್ಯೆ ಉತ್ತರಿಸಿದ ತುಂಟ ಪ್ರಶ್ನೆಗಳು ವಾತಾವರಣವನ್ನು ಹಾಸ್ಯಮಯವಾಗಿಸಿತು. ಹಾಸ್ಯದ ತಿಳಿ ವಾತಾವರಣ ಪ್ರಯಾಣಿಕರು ಅಪರಿಚಿತತೆಯ ಗೂಡಿನಿಂದ ಹೊರಬರುವಂತೆ ಪ್ರೇರೇಪಿಸಿತು. ನಂತರ ಕನ್ನಡ ಹಾಡುಗಳ ಅಂತಾಕ್ಷರಿ ಸುಮಾರು ಮೂರು ಗಂಟೆಗಳ ಹಸ್ತಿನಾಪುರದ ಪ್ರಯಾಣವನ್ನು ಮೂರು ನಿಮಿಷಗಳೆಂಬಂತೆ ಮುಗಿದು ಹೋಯಿತು. ಹಸ್ತಿನಾಪುರದಲ್ಲಿ ಜೈನಮಂದಿರಕ್ಕೆ ಭೇಟಿ ನೀಡಿ ಅಲ್ಲಿನ ಮೂರುಲೋ, ಸುಮೇರು ಪರ್ವತ, ಜಂಬೂದ್ವೀಪ ದರ್ಶನ, ತೀರ್ಥಂಕರ ಮಂದಿರ ಮುಂತಾದವುಗಳನ್ನು ನೋಡುತ್ತಿದ್ದಂತೆ ಊಟದ ಸಮಯವಾದದ್ದು ತಿಳಿಯಲಿಲ್ಲ. ಎಲ್ಲ ಬಸ್ಸಿನ ಸುಮಾರು 700 ಮಂದಿಯನ್ನು ಒಂದೆಡೆ ಸೇರಿಸಿ ಕಾರ್ಯಕಾರಿ ಸಮಿತಿ ಒಂದು ಪುಟ್ಟ ಸಂವಾದ ನಡೆಸಿದ್ದು ಸೂಕ್ತವಾಗಿತ್ತು. ಆದರೆ ಒಮ್ಮೆಗೆ 700 ಮಂದಿ ಊಟದ ಸ್ಥಳಕ್ಕೆ ಭೇಟಿಕೊಟ್ಟಾಗ ಸ್ವಲ್ಪ ತೊಂದರೆಗಳಾಗಿದ್ದು ಸಹಜ. ಈ ಅನುಭವ ಮುಂದಿನ ದಿನಗಳ ಪ್ರವಾಸಕ್ಕೆ ಉತ್ತಮ ಪಾಠ.

ಟೀ ಸೇವನೆಯೊಂದಿಗೆ ಪ್ರಯಾಣ ಮುಂದುವರೆಸಿದ ನಾವು ಪೌರಾಣಿಕ ಹಸ್ತಿನಾಪುರವನ್ನು ದರ್ಶಿಸಲು ಕಾತುರರಾಗಿದ್ದೆವು. ಕುರುವಂಶದ ರಾಜಧಾನಿಯಲ್ಲಿ ಹಿಂದಿನ ರಾಜ ಆಡಳಿತದ ಯಾವ ಕುರುಹುಗಳು ಕಾಣಿಸಲೇ ಇಲ್ಲವೋ ಅಥವಾ ಶಿಥಿಲಗೊಂಡು ನಿರ್ನಾಮಗೊಂಡಿದ್ದವೋ ತಿಳಿಯಲಿಲ್ಲ. ಮಹಾದೇವನ ಮಂದಿರ, ಭೀಮ ನೆಟ್ಟ ಮರ, ಪಾಂಡವರ ಶಕ್ತಿದೇವತೆಯ ದರ್ಶನ ರೋಮಾಂಚನವನ್ನುಂಟು ಮಾಡಿತ್ತು. ಅದರಲ್ಲೂ ಮೇರಠ್ ನಗರದ ಹಸ್ತಿನಾಪುರದ ಕ್ಲಿಷ್ಟ ತಿರುವುಗಳನ್ನು ನಿಭಾಯಿಸಿದ ನಮ್ಮ ಬಸ್ಸಿನ ಚಾಲಕ ಇಕ್ಬಾಲ್ ಅಭಿನಂದನಾರ್ಹ. ಹೀಗೆ ಸಂಜೆಯಾಗುತ್ತಿದ್ದಂತೆ ನಾವು ಹಸ್ತಿನಾಪುರವನ್ನು ಬಿಟ್ಟು ದೆಹಲಿಯ ಕಡೆಗೆ ಹೊರಟೆವು. ರಾತ್ರಿಯ ಭೋಜನವನ್ನು ಮತ್ತೆ ಬೆಳಗ್ಗೆ ಉಪಹಾರ ಸವಿದ ಸ್ಥಳದಲ್ಲೇ ಸವಿದು ದೆಹಲಿ ಕಡೆಗೆ ಹೊರಟಾಗ ಭಾನುವಾರವಾದ್ದರಿಂದ ಎಲ್ಲೆಲ್ಲೂ ಮದುವೆ ಮೆರವಣಿಗೆಗಳ ಅರ್ಭಟ, ದಾರಿಯುದ್ದಕ್ಕೂ ಆಮೆ ವೇಗದಲ್ಲಿ ಹೊರಟ ಬಸ್ಸು ನಮ್ಮ ನಮ್ಮ ಮನೆಗಳನ್ನು ತಲುಪಿಸಿದಾಗ ಸರಿ ಮಧ್ಯ ರಾತ್ರಿಯಾಗಿತ್ತು. ತಿಳಿದವರು ಹೇಳುವಂತೆ ಅನುಭವ ಸಿಹಿಯಲ್ಲ ಅದರ ನೆನಪು ಸಿಹಿ ಎಂಬಂತೆ ಪ್ರವಾಸದ ಈ ಪಯಣ ಪ್ರಯಾಸದ್ದಾಗಿದ್ದರೂ ಅದರ ಸವಿನೆನಪು ಮನದಲ್ಲಿ ಶಾಶ್ವತವಾಗಿರುವುದು ಎಂದೇ ನನ್ನ ಭಾವನೆ.

*ರೂಪಶ್ರೀ ನರಸಿಂಹಮೂರ್ತಿ*



# ಹಸ್ತಿನಾಪುರ ಪ್ರವಾಸದ ಸವಿ ನೆನಪುಗಳು



ದೆಹಲಿ ಕರ್ನಾಟಕ ಸಂಘವು ಮೊದಲ ಬಾರಿಗೆ ದೆಹಲಿಯಿಂದ ಹೊರಗಡೆಗೆ ಆಯೋಜಿಸಿದ ಪಿಕ್ ನಿಕ್ ನಲ್ಲಿ ಸುಮಾರು 700ಜನ ಪಾಲ್ಗೊಂಡಿದ್ದರು. ಗುರುಗಾಂವ್ ಪಟ್ಟಣದಿಂದ ನಾವು ಸುಮಾರು 40 ಜನ ಈ ಕಾರ್ಯಕ್ರಮದಲ್ಲಿ ಭಾಗಿಯಾದೆವು. ನಮ್ಮೆಲ್ಲರಿಗೆ ಗುರುಗಾಂವ್‌ಗೆ ಪ್ರತ್ಯೇಕ ಬಸ್ ಒಂದನ್ನು ಕಳುಹಿಸಿದ್ದರು. ಕಾರ್ಯಕ್ರಮದ ಆಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ ದೆಹಲಿ ಕರ್ನಾಟಕದ ಸಂಘದ ಕಾರ್ಯಕಾರಿ ಸಮಿತಿಗೆ ನಾವೆಲ್ಲರೂ ಕೃತಜ್ಞರು.

ಈ ಕಾರ್ಯಕ್ರಮಕ್ಕೆ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಪಿಕ್‌ನಿಕ್ ಅಂತ ಹೆಸರು ಇಟ್ಟಿದ್ದರು. ಪಿಕ್‌ನಿಕ್ ಅನ್ನುವುದಕ್ಕಿಂತ ಇದು ಪ್ರವಾಸವೇ ಆಗಿತ್ತು. ಪಾಂಡವರ ಮತ್ತು ಕೌರವರ ರಾಜಧಾನಿ ಹಸ್ತಿನಾಪುರ ದರ್ಶಿಸಲು ನಮ್ಮೆಲ್ಲರ ಮನವು ಬೆಳಗ್ಗೆಯಿಂದ ಕಾತರಿಸುತ್ತಿತ್ತು. ಬೆಳಗ್ಗೆ ಆರು ಗಂಟೆಯಿಂದ ಶುರುವಾದ ನಮ್ಮ ಪ್ರಯಾಣ ಏಳು ಮುಕ್ಕಾಲಕ್ಕೆ ಘಾಜಿಯಾಬಾದ್‌ನ, ಡ್ರಿಜ್ಲಿಲಿಂಗ್ ಲ್ಯಾಂಡ್ ಹೋಟೆಲ್‌ನಲ್ಲಿ ಉಪಹಾರ ಮುಗಿಸಿ ಬೆಳಗ್ಗೆ ಹನ್ನೊಂದು ಗಂಟೆಗೆ ಹಸ್ತಿನಾವತಿಗೆ ಸೇರಿದೆವು. ಆದರೆ ಉತ್ಸಾಹದಿಂದ ಬಂದ ನಮಗೆ ಆಶ್ಚರ್ಯ ಕಾದಿತ್ತು. ಸನಾತನ ಧರ್ಮದ ನೆಲೆಯಾದ ಹಸ್ತಿನಾವತಿ ಇಂದು ಜೈನ ಧರ್ಮಕ್ಕೆ ಸಾಕ್ಷಿಯಾಗಿ ನಿಂತಿತು.

ನಾವು ಅಲ್ಲಿ ಮೊದಲು ದರ್ಶಿಸಿದ ದೇವಸ್ಥಾನ

## ಅಷ್ಟಪಾದ ವೃಷಭದೇವ ದೇವಸ್ಥಾನ

(ಶ್ವೇತಂಬರಾ) ವೃಷಭದೇವ ತೀರ್ಥಂಕರರು ಜೈನ ಧರ್ಮದ ಪ್ರಥಮ ತೀರ್ಥಂಕರರು ಆಗಿದ್ದರು. ದಂತಕಥೆಗಳ ಪ್ರಕಾರ, ಪ್ರಥಮ ತೀರ್ಥಂಕರರಾದ ಭಗವಾನ್ ವೃಷಭದೇವರು ಹಸ್ತಿನಾಪುರದ ಮಹಾರಾಜ ಆಗಿದ್ದರು. ಅವರಿಗೆ ಬಂದ ಮತ್ತು ಸುನಂದ ಎಂಬ ಇಬ್ಬರು ಪತ್ನಿಯರು. ಇಬ್ಬರು ಹೆಣ್ಣು ಮಕ್ಕಳು ಮತ್ತು 100 ಜನ ಗಂಡು ಮಕ್ಕಳು ಇದ್ದರು. ನಂದಾಗೆ ಭರತ ಮತ್ತು ಸುನಂದಗೆ ಬಾಹುಬಲಿ ಪ್ರೀತಿಯ ಮಕ್ಕಳು ಆಗಿದ್ದರು. ವೃಷಭದೇವನು ತಂದೆಯ ಮರಣದಿಂದ ವೈರಾಗ್ಯ ಹೊಂದಿ ಈ ಸ್ಥಳದಲ್ಲಿಯೇ ಮುಕ್ತಿಯನ್ನು ಪಡೆದರು. ಮತ್ತು ಮಹಾರಾಜ ಭರತ ಚಕ್ರವರ್ತಿಯ ಮಗನು ಅಷ್ಟಪಾದ ಪರ್ವತದ ಮೇಲೆ ಅರಮನೆಯನ್ನು ನಿರ್ಮಿಸಿ, ವಜ್ರಗಳಿಂದ ಅದನ್ನು ಅಲಂಕರಿಸಿದನು. ಮುಕ್ತಿಯನ್ನು ಹೊಂದುವ ಸಲುವಾಗಿಯೇ ಅನೇಕರು ಅಷ್ಟಪಾದಕ್ಕೆ ಭೇಟಿ ನೀಡುತ್ತಾರೆ ಎಂಬ ನಂಬಿಕೆ ಇದೆ. ಈ ನಂಬಿಕೆಯ ಕಾರಣದಿಂದಾಗಿ ಹಸ್ತಿನಾಪುರದಲ್ಲಿ ಜೈನ ಸಮುದಾಯದವರು ಅಷ್ಟಪಾದದ ಒಂದು ಪ್ರತಿಕೃತಿಯನ್ನು ನಿರ್ಮಿಸಿದ್ದಾರೆ. ಈ ಸ್ಥಳವು ಮೊದಲ ತೀರ್ಥಂಕರರು ಜನ್ಮ ತಳೆದ ಸ್ಥಳವಾಗಿದೆ. ಈ ಭವ್ಯವಾದ ನಿರ್ಮಾಣಕ್ಕೆ 25 ಕೋಟಿ ರೂಗಳನ್ನು ವ್ಯಯಿಸಲಾಯಿತು. ಇದರ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲು ಎರಡು ದಶಕಗಳ ಕಾಲ ಬೇಕಾಯಿತು. 151 ಅಡಿ ಎತ್ತರ, 108 ಅಡಿ ವ್ಯಾಸವನ್ನು ಸ್ಥಳವು ಹೊಂದಿದೆ. ಇಲ್ಲಿ ನಾಲ್ಕು ದ್ವಾರಗಳಿವೆ. ಇವುಗಳನ್ನು ಹಾದು ಹೋಗುವ ಮೂಲಕ ಇಲ್ಲಿಗೆ ತಲುಪಬಹುದು. ಇದು ಎಂಟು ಪಾದಗಳನ್ನು ಅಥವಾ ಎಂಟು ಹೆಜ್ಜೆಗಳನ್ನು ಒಳಗೊಂಡಿದೆ. ಪ್ರತಿಯೊಂದು ಪಾದವು 108 ಅಡಿ ಎತ್ತರವಾಗಿದೆ.

## ಜಂಬೂದ್ವೀಪ ಮಂದಿರ

ಜೈನ ಜಂಬೂದ್ವೀಪ ಮಂದಿರದ ನಿರ್ಮಾಣವನ್ನು ಮಹಾ ತ್ಯಾಗಿ ಮತ್ತು ಶ್ರಮ ಜೀವಿಯಾದ ಜೈನ ಸಾಧ್ವಿ, ಪರಮ ಪೂಜ್ಯ ಶಿರೋಮಣಿ ಶ್ರೀ ಜ್ಞಾನ ಮಾತಾಜಿಯ ಗೌರವಾರ್ಥವಾಗಿ ಮತ್ತು ಸ್ಮರಣಾರ್ಥವಾಗಿ ಮಾಡಲಾಗಿದೆ. ಸಾಧ್ವಿಯು ಸರಿಯಾದ ಸ್ಥಳವನ್ನು ಅನ್ವೇಷಣೆ ಮಾಡುವ ಸಲುವಾಗಿ ದೇಶಾದ್ಯಂತ ಪಾದಯಾತ್ರೆಯನ್ನು ಕೈಗೊಂಡರು. ಕೊನೆಗೆ ಅವರು ಹಸ್ತಿನಾಪುರದಲ್ಲಿ ನೆಲೆ ನಿಂತರು. ಈ ಸ್ಥಳದ ಪಾವಿತ್ರ್ಯತೆಯನ್ನು ಗುರುತಿಸಿದರು. ತನ್ನ ಕನಸಿನ ಯೋಜನೆಯ ನಿರ್ಮಾಣ ಕಾರ್ಯವನ್ನು ಇಲ್ಲಿಯೇ ಮಾಡಬೇಕೆಂದು ನಿರ್ಧರಿಸಿದರು. ದೇವಾಲಯದ ಶಂಕು ಸ್ಥಾಪನೆಯನ್ನು 1974ರಲ್ಲಿ ಮಾಡಲಾಯಿತು ಮತ್ತು 1985ರಲ್ಲಿ ಈ ದೇವಾಲಯದ ನಿರ್ಮಾಣ ಕಾರ್ಯವು ಸಂಪೂರ್ಣಗೊಂಡಿತು. ಈ ದೇವಾಲಯದ ರಚನೆಯು ಜೈನ ಭೌಗೋಳಿಕತೆಯು ಸೂಚಿಸುವಂತೆ ಬ್ರಹ್ಮಾಂಡದ ಮಾದರಿಯನ್ನು ಚಿತ್ರಿಸುತ್ತದೆ. ಇದರ ಮಧ್ಯದಲ್ಲಿ 101 ಅಡಿ ಎತ್ತರದ ಸುಮೇರು ಪರ್ವತವು ನೆಲೆಗೊಂಡಿದೆ. ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣದ ನಾಲ್ಕು ದಿಕ್ಕುಗಳು, ನಾಲ್ಕು ಪ್ರದೇಶಗಳಲ್ಲಿ ಚಾಚಿ ಕೊಂಡಿರುವಂತೆ 250 ಅಡಿ ವ್ಯಾಸ ಉಳ್ಳ ಜಂಬೂದ್ವೀಪ ದೇವಸ್ಥಾನವಿದೆ.

## ಹಳೆಯ ಪಾಂಡವೇಶ್ವರ ದೇವಸ್ಥಾನ

ಹಸ್ತಿನಾಪುರ ಎಂದರೆ, ಆನೆಗಳ ನಗರ ಎಂದು ಅರ್ಥ. ಮಹಾಭಾರತದ ಕಾಲದಲ್ಲಿ ಹಸ್ತಿನಾಪುರವು ಕೌರವರ ರಾಜಧಾನಿಯಾಗಿತ್ತು. ಮಹಾಭಾರತದ ಕಾಲದಲ್ಲಿ ಪಾಂಡವರು ಮತ್ತು ಕೌರವರ ಮಧ್ಯೆ ಕುರುಕ್ಷೇತ್ರ ಯುದ್ಧ ನಡೆಯಿತು. ಅದರ ಮೂಲ ಬೇರುಗಳನ್ನು ನಾವು ಹಸ್ತಿನಾಪುರದಲ್ಲಿ ಕಾಣಬಹುದು. ಮಹಾಭಾರತದ ಕುರುಕ್ಷೇತ್ರ



ಯುದ್ಧದಲ್ಲಿ ಪಾಂಡವರಿಗೆ ಗೆಲುವಾಯಿತು. ನಂತರ ಹಸ್ತಿನಾಪುರವನ್ನು ಪಾಂಡವರು ಆಳಿದರು.

ಹಸ್ತಿನಾಪುರದ ಹಳೆಯ ನಗರದ ಅವಶೇಷಗಳು ಇರುವೆ ಸ್ಥಳದಲ್ಲಿ ನಾವು ಹಳೆಯ ಪಾಂಡೇಶ್ವರ ದೇವಸ್ಥಾನವನ್ನು ಕಾಣಬಹುದು. ಇದು ಶಿವನ ದೇವಸ್ಥಾನವಾಗಿದೆ. ದಂತ ಕಥೆಗಳ ಪ್ರಕಾರ, ಈ ದೇವಾಲಯದ ಗರ್ಭಗುಡಿಯಲ್ಲಿರುವ ಶಿವನ ಲಿಂಗವನ್ನು ದಾನ ವೀರ ಕರ್ಣನು ದಾನ ಮಾಡಿದ್ದಾನೆ ಎಂದು ಹೇಳಲಾಗುತ್ತದೆ. ಕರ್ಣನು ಪಾಂಡವರ ಹಿರಿಯ ಸಹೋದರನಾಗಿದ್ದು, ಅಂದಿನ ಕಾಲದಲ್ಲಿ ಅತ್ಯಂತ ಕೊಡುಗೈ ದಾನ ವೀರ ಎಂದು ಪ್ರಸಿದ್ಧನಾಗಿದ್ದನು.

ಬಂಗಾಳಿ ಸಮುದಾಯದವರಿಂದ ಚಿಕ್ಕ ಪರ್ವತದ ಮೇಲೆ ನಿರ್ಮಿಸಲ್ಪಟ್ಟ ಕಾಳಿ ದೇವತೆಯ ವಿಗ್ರಹದ ಕೆಳಗಡೆ ಈ ದೇವಸ್ಥಾನವನ್ನು ಸ್ಥಾಪಿಸಲಾಗಿದೆ. ಇದು ಹಸ್ತಿನಾಪುರ ನಗರದ ಮತ್ತು ಅದರ ಸುತ್ತಮುತ್ತಲಿನ ಸ್ಥಳಗಳ ರಮಣಿಯ ನೋಟವನ್ನು ಒದಗಿಸುತ್ತದೆ.

ಪಾಂಡವರ ಬಾವಿ ಇದೆ. ಸ್ಥಳೀಯರ. ಪ್ರಕಾರ ಕಾಲಾಂತರದಲ್ಲಿ ಹಸ್ತಿನಾಪುರದ ರಾಜಧಾನಿ ಭೂಮಿ ಗರ್ಭದಲ್ಲಿ ಮುಳುಗಿದೆ. ಈಗ ಈ ಸ್ಥಳ ಪುರಾತತ್ವ ಶಾಖೆಯ ಅಧೀನದಲ್ಲಿ ಇದೆ.



## ದಿಗಂಬರ ಜೈನ ಬಡಾ ದೇವಸ್ಥಾನ

ದಿಗಂಬರ ಜೈನ ಬಡಾ ದೇವಸ್ಥಾನವು ನಗರದ ಅತ್ಯಂತ ಹಳೆಯ ಜೈನ ದೇವಸ್ಥಾನವಾಗಿದೆ. ಬಡಾ ಎಂಬ ಶಬ್ದವು ಈ ದೇವಾಲಯವು ನಿಜವಾಗಿಯೂ ಎಷ್ಟು ದೊಡ್ಡದಾಗಿದೆ ಎಂಬುದನ್ನು ಸೂಚಿಸುತ್ತದೆ. ಇದು ನಲವತ್ತು ಅಡಿ ಎತ್ತರದ ಪರ್ವತದ ಮೇಲೆ ಇದೆ. ಈ ಭವ್ಯವಾದ ದೇವಾಲಯವು ನಾಲ್ಕು ಅಡಿ ಎತ್ತರದ ಪೀಠದ ಮೇಲೆ ನಿರ್ಮಿಸಲಾಗಿದೆ. ಕೃತಕವಾಗಿ ನಿರ್ಮಿಸಲ್ಪಟ್ಟ ಉದ್ದ ಗೋಪುರದಿಂದ ಅಲಂಕೃತಗೊಂಡಿದೆ. ಈ ದೇವಾಲಯವು ಮೂರು ದ್ವಾರಗಳನ್ನು ಒಳಗೊಂಡಿದೆ. ಭಗವಾನ್ ಶಾಂತಿನಾಥರ ಶ್ವೇತ ವರ್ಣದ ಪ್ರತಿಮೆಯನ್ನು ನೀವು ಇಲ್ಲಿ ಕಾಣಬಹುದು. ಈ ದೇವಸ್ಥಾನದ ಪ್ರಮುಖ ದೇವತೆಯು ಪದ್ಮಾಸನದ ಭಂಗಿಯಲ್ಲಿದೆ. ಈ ದೇವಾಲಯದ ಅದ್ವಿತೀಯ ಲಕ್ಷಣ ಎಂದರೆ, ಈ ದೇವಸ್ಥಾನದ ಸಂಪೂರ್ಣ ಎತ್ತರವನ್ನು ಸುರುಳಿಯಾಕಾರದ ರಚನೆಯಲ್ಲಿ ನಿರ್ಮಿಸಲಾಗಿದೆ. ಇದರ ಒಳಾಂಗಣ ವಿನ್ಯಾಸವನ್ನು ಜೈನ ಧರ್ಮಗ್ರಂಥಗಳ ಕಥೆಗಳನ್ನು ಹೇಳುವ ಸ್ವರ್ಣ ವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ಈ ಒಳಾಂಗಣ ವಿನ್ಯಾಸವನ್ನು ಮಾಡಲು ಸುಮಾರು 7–8 ಕಿಲೋ ಗ್ರಾಂ ಚಿನ್ನವನ್ನು ವ್ಯಯಿಸಲಾಯಿತು ಎಂಬ ನಂಬಿಕೆ ಇದೆ.

ಈ ದೇವಾಲಯದ ಆವರಣವು ಗ್ರಂಥಾಲಯ, ವೃದ್ಧಾಶ್ರಮ, ಜೈನಮಂದಿರ, ಆಚಾರ್ಯ ವಿದ್ಯಾನಂದ ಮ್ಯೂಜಿಯಂ ಮತ್ತು ಕೈಲಾಶ ಪರ್ವತಗಳಿಗೆ ನೆಲೆಯಾಗಿದೆ. ಈ ದೇವಾಲಯದಲ್ಲಿ ಭಕ್ತರು ಉಳಿದುಕೊಳ್ಳುವುದಕ್ಕೆ ವಸತಿ ಮತ್ತು ಊಟದ ವ್ಯವಸ್ಥೆ ಸೌಲಭ್ಯವಿದೆ.

## ಕೈಲಾಸ ಪರ್ವತ

ಕೈಲಾಸ ಪರ್ವತವು ಹಿಮಾಲಯ ಪರ್ವತದ ಹಿಮಚ್ಛಾದಿತ ಪ್ರದೇಶದಲ್ಲಿ ನೆಲೆಗೊಂಡಿದೆ. ಇದು ಜೈನರ ಪವಿತ್ರ ಸ್ಥಳ ಎಂದು ಪರಿಗಣಿಸಲ್ಪಟ್ಟಿದೆ. ಇಲ್ಲಿ ಪ್ರಥಮ ತೀರ್ಥಂಕರರಾದ ಭಗವಾನ ವೃಷಭ ದೇವರು ಮುಕ್ತಿಯನ್ನು ಹೊಂದಿದರು ಎಂಬ ನಂಬಿಕೆ ಇದೆ. ಆದರೆ ಎಲ್ಲ ಭಕ್ತರಿಗೂ ಮೂಲ ಕೈಲಾಶ ಪರ್ವತಕ್ಕೆ ಭೇಟಿ ಕೊಡಲು ಆಗುವುದಿಲ್ಲ. ಆದ್ದರಿಂದ ಜೈನ ಸಮುದಾಯದವರು ಹಸ್ತಿನಾಪುರದಲ್ಲಿ, ಭಗವಾನ್ ವೃಷಭ ದೇವರು ಜನ್ಮ ತಳೆದ ಸ್ಥಳದಲ್ಲಿ ಕೈಲಾಶ ಪರ್ವತದ ಪ್ರತಿಕೃತಿಯನ್ನು ನಿರ್ಮಿಸಿದ್ದಾರೆ.

ಹಸ್ತಿನಾಪುರದಲ್ಲಿರುವ ಕೈಲಾಶ ಪರ್ವತಗಳನ್ನು ಮೂರು ಹಂತಗಳಲ್ಲಿ ನಿರ್ಮಿಸಲಾಗಿದೆ. ವೃತ್ತಾಕಾರದ ರೀತಿಯಲ್ಲಿ ನಿರ್ಮಿಸಲಾಗಿರುವ 72 ದೇವಾಲಯಗಳನ್ನು ಒಳಗೊಂಡಿದೆ. ಈ ದೇವಾಲಯಗಳು ಭೂತ, ವರ್ತಮಾನ ಮತ್ತು ಭವಿಷ್ಯದ ತೀರ್ಥಂಕರರನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ವೃತ್ತಾಕಾರದ ಹಂತವು ಒಂದು ನಿರ್ದಿಷ್ಟ ಅವಧಿಯ 24 ತೀರ್ಥಂಕರಗಳನ್ನು ಪ್ರತಿನಿಧಿಸುತ್ತದೆ. ಈ ಕಟ್ಟಡದ ಒಂದು ವಿಶೇಷ ಲಕ್ಷಣ ಎಂದರೆ, ಇದರ ದ್ವಾರಗಳು, ಅಲಂಕೃತ ಛಾವಣಿಗಳು, ಕಂಬಗಳು ಮತ್ತು ಫಲಕಗಳು ಅದ್ಭುತವಾದ ನಯನ ಮನೋಹರ ಕೆತ್ತನೆಗಳನ್ನು ಹೊಂದಿವೆ. ಈ ಎಲ್ಲ ಸ್ಥಳಗಳನ್ನು ನಾವೆಲ್ಲರೂ ಸೇರಿ ಅತ್ಯಂತ ಆನಂದದಿಂದ ವೀಕ್ಷಣೆ ಮಾಡಿದೆವು ಹೋಗುವಾಗ ಅಂತಾಕ್ಷರಿ ಹಾಡಿಕೊಂಡು ಹೋಗಿದ್ದ ನಾವೆಲ್ಲರೂ ಬರುವಾಗ ಬಾಲಕ ಮತ್ತು ಬಾಲಕಿಯರ ನಡುವೆ ಮಿತ್ರರು ರಸಪ್ರಶ್ನೆ ಕೇಳುತ್ತ ಯಾವಾಗ ಗಾಜಿಯಾಬಾದ್ ಗೆ ಬಂದವೋ ನಮಗೆ ತಿಳಿಯಲೇ ಇಲ್ಲ. ಮತ್ತೆ ಡ್ರಿಜ್ಲಿಲಿಂಗ್ ಲ್ಯಾಂಡ್ ಡಿನ್ನರ್ ಮುಗಿಸಿ ರಾತ್ರಿ ಮನೆಗೆ ತಲುಪುವಾಗ ರಾತ್ರಿ ಒಂದು ಗಂಟೆ ಆಗಿತ್ತು. ಒಂದು ಒಳ್ಳೆಯ ಪ್ರವಾಸದ ಅನುಭವ ನಮ್ಮ ಜೊತೆಗೆ ಇತ್ತು. ಅ

*ಚಂದ್ರಶೇಖರ್ ಜೋಳದರಾಶಿ*






# ಸುಧೀರ್ ಫಡ್ನೀಸ್‌ರ ಚಿತ್ರಕಲಾ ಪ್ರದರ್ಶನ






ದೆಹಲಿಯ ಹೆಸರಾಂತ ಕಲಾವಿದರಲ್ಲೊಬ್ಬರಾದ ಸುಧೀರ್ ಫಡ್ನೀಸ್ ಅವರ ಚಿತ್ರಕಲಾ ಪ್ರದರ್ಶನವು ಇದೇ ಜನವರಿ 22 ರಿಂದ 25ರವರೆಗೆ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಯಶಸ್ವಿಯಾಗಿ ನಡೆಯಿತು.

ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಬೆಂಗಳೂರು ಪ್ರಾಯೋಜಿಸಿದ ಈ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಜಂಟಿ ಮಹಾ ನಿರ್ದೇಶಕರಾದ ಡಾ. ಅಮಯಚಂದ್ರ ಅವರು ಉದ್ಘಾಟಿಸಿದರು. ಡಾ. ರಾಮಚಂದ್ರ, ಉಪ ಮಹಾಪ್ರಬಂಧಕ, ಕೆನರಾ ಬ್ಯಾಂಕ್ ಬೆಂಗಳೂರು ಈ ಸಂದರ್ಭದಲ್ಲಿ ಕಲಾವಿದ ಫಡ್ನೀಸರಿಗೆ ಶುಭ ಹಾರೈಸಿದರು. ಜನವರಿ ತಿಂಗಳ ಆರಂಭದಲ್ಲಿ ಕೇರಳದ ತಿರುವನಂತಪುರದಲ್ಲಿ ನಡೆದ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಫಡ್ನೀಸ್‌ರವರ ಕಲಾಕೃತಿಗಳು ಪ್ರಶಂಸೆ ಪಡೆದವು. ಆ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟ ಅವರ ಒಂದು ಕಲಾಕೃತಿ (ಗಣೇಶೋತ್ಸವ) ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾದ ಎಂಟು ಕೃತಿಗಳ ಪಟ್ಟಿಯಲ್ಲಿ ಕೊನೆಯದಾಗಿ ಸೇರಿಕೊಂಡಿತ್ತು.

ಗಣರಾಜ್ಯ ದಿನೋತ್ಸವದ ಅಂಗವಾಗಿ ಇದೇ ಜನವರಿ 26 ರಿಂದ 29 ರವರೆಗೆ ದೆಹಲಿಯ ಕೆಂಪುಕೋಟೆಯಲ್ಲಿ ನಡೆದ 'ಭಾರತ ಪರ್ವ' ಕಲಾ ಪ್ರದರ್ಶನದಲ್ಲಿ ಕೂಡಾ ಫಡ್ನೀಸ್ ಅವರು ತಮ್ಮ ಚಿತ್ರಕಲೆಗಳನ್ನು ಪ್ರದರ್ಶಿಸಿದ್ದಾರೆ.

ಈಗಾಗಲೇ ತಮ್ಮ ಅತ್ಯುತ್ತಮ ಚಿತ್ರಕಲೆಗಳ ಮೂಲಕ ದೇಶದಾದ್ಯಂತ ಹೆಸರು ಮಾಡಿರುವ ಫಡ್ನೀಸ್ ಅವರು ಇನ್ನೂ ಹೆಚ್ಚು ಒಳ್ಳೆಯ ಕಲಾಚಿತ್ರಗಳನ್ನು ರಚಿಸಿ ಕಲಾ ರಸಿಕರಿಗೆ ನೀಡುವಂತಾಗಲಿ ಎಂದು ಮುಖ್ಯ ಅತಿಥಿಗಳಾದ ಡಾ. ಅಮಯಚಂದ್ರ ಅವರು ಹಾರೈಸಿದರು. ಇದೇ ಸಂದರ್ಭದಲ್ಲಿ ಹಾಜರಿದ್ದ ದೆಹಲಿಯ ಹಲವಾರು ಮಂದಿ ಗಣ್ಯ ಕನ್ನಡಿಗ ಕಲಾವಿದರು ಸಹ ಫಡ್ನೀಸ್ ಅವರ ಕಲಾಕೃತಿಗಳನ್ನು ವೀಕ್ಷಿಸಿ ಆನಂದಿಸುವುದರ ಜೊತೆಗೆ ಅವರಿಗೆ ಇನ್ನೂ ಹೆಚ್ಚು ಯಶಸ್ಸು ದೊರೆಯಲಿ ಎಂದು ಹಾರೈಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ



ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಚೆನ್ನು ಎಸ್. ಮಠದ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅ

***ಅಭಿಮತ ವರದಿ***

## ಸುದ್ದಿ ಚಿತ್ರ



ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 24ರಂದು ನಡೆದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಎಸ್.ಐ. ಭಾವೀಕಟ್ಟಿ ಮತ್ತು ಜಂಟೀ ಕಾರ್ಯದರ್ಶಿಗಳಾದ ಶ್ರೀ ಬಲವಂತರಾವ್ ಪಾಟೀಲ್ ಅವರುಗಳನ್ನು ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಸಖಾರಾಮ ಉಪ್ಪೂರು ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಖಜಾಂಚಿ ಕೆ.ಎಸ್.ಜಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯ ತ್ಯಾಗೇಶ್‌ಮೂರ್ತಿ ಮತ್ತು ರೂಪಾಂತರ ನಾಟಕ ತಂಡದ ನಿರ್ದೇಶಕ ಕೆ.ಎಸ್.ಡಿ.ಎಲ್. ಚಂದ್ರು ಅವರು ಹಾಜರಿದ್ದರು.

ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 24ರಂದು ನಡೆದ ಕಾರ್ಯಕ್ರಮದಲ್ಲಿ ದೆಹಲಿಯಿಂದ ವರ್ಗಾವಣೆಗೊಂಡು ಬೆಂಗಳೂರಿಗೆ ತೆರಳಿದ ಹೊಸದಿಗಂತ ಪತ್ರಿಕೆಯ ದೆಹಲಿ ವರದಿಗಾರ ಶ್ರೀ ವೃಷಾಂಕ್ ಭಟ್ ಅವರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಪುಷ್ಪಗುಚ್ಛ ನೀಡಿ ಬೀಳ್ಕೊಟ್ಟರು.



# ರಾಷ್ಟ್ರ ರಾಜಧಾನಿಯಲ್ಲಿ ಸಂಕ್ರಾಂತಿ ಮಿಲನ



ಕಾಲ ಕಾಲಕ್ಕೆ ಬದಲಾಗುವ ಪ್ರಕೃತಿಯೊಂದಿಗೆ ಸಾಂಗತ್ಯವನ್ನು ಸಾಧಿಸಬಲ್ಲ ಜೀವನಶೈಲಿಯನ್ನು ನಾವೆಲ್ಲರೂ ಅನುಸರಿಸುವುದು ಇಂದಿನ ಅನಿವಾರ್ಯವಾಗಿದೆ ಎಂದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇತ್ತೀಚಿಗೆ ಪ್ಯಾರಿಸ್ ನಲ್ಲಿ ನಡೆದ "ಹವಾಮಾನ ಬದಲಾವಣೆ" (ಕ್ಲೈಮೇಟ್ ಚೇಂಜ್) ಕುರಿತ ಸಮ್ಮೇಳನದಲ್ಲಿಯೂ ಇದೇ ಅಭಿಪ್ರಾಯ ಪ್ರತಿಧ್ವನಿಸಿತೆಂದು ಹೇಳಿದರು. ಕೇಂದ್ರ ನಗರಾಭಿವೃದ್ಧಿ ಸಚಿವ ಶ್ರೀ ಎಂ. ವೆಂಕಯ್ಯ ನಾಯ್ಡು ಅವರು ತಮ್ಮ ಅಧಿಕೃತ ನಿವಾಸದಲ್ಲಿ ಏರ್ಪಡಿಸಿದ್ದ "ಸಂಕ್ರಾಂತಿ ಮಿಲನ" ಕಾರ್ಯಕ್ರಮದಲ್ಲಿ ಪಾಲ್ಗೊಂಡು ಎಲ್ಲರಿಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು ಕೋರಿ ಮಾತನಾಡುತ್ತಿದ್ದ ಮಾನ್ಯ ಪ್ರಧಾನ ಮಂತ್ರಿ ಯವರು ಭಾರತದಲ್ಲಿ ಪರಂಪರಾಗತವಾಗಿ ಮನುಷ್ಯ ಮತ್ತು ಪ್ರಕೃತಿಗಳೆರಡರ ನಡುವೆಯೂ ಅವಿನಾಭಾವ ಸಂಬಂಧ ಬೆಳೆದು ಬಂದಿರುವುದಕ್ಕೆ ನಮ್ಮ ದೇಶದಲ್ಲಿ ಆಚರಿಸಲ್ಪಡುತ್ತಿರುವ ಹಬ್ಬ ಹರಿದಿನಗಳೇ ಅತ್ಯುತ್ತಮ ಉದಾಹರಣೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ಇಡೀ ವಿಶ್ವವೇ ಪ್ರಕೃತಿಯಲ್ಲಿ ಘಟಿಸುತ್ತಿರುವ ವಿದ್ಯಮಾನಗಳ ಬಗ್ಗೆ ಕಳವಳಗೊಂಡಿದ್ದು ಹವಾಮಾನ ವೈಪರೀತ್ಯದಂತಹ ಸಮಸ್ಯೆಗಳನ್ನು ಎದುರಿಸಲು ಹೇಗೆ ಸಜ್ಜಾಗಬೇಕು ಎಂಬುದನ್ನು ಚಿಂತನೆ ನಡೆಸುವ ಕುರಿತಂತೆ ಪ್ಯಾರಿಸ್‌ನಲ್ಲಿ ನಡೆದ ಹವಾಮಾನ ಸಮ್ಮೇಳನ ನಿರ್ಣಯವೊಂದನ್ನು ಅನುಮೋದನೆ ಮಾಡಿದೆ. ಆದರೆ ಕೃಷಿಯೇ ಬೆನ್ನೆಲುಬಾಗಿರುವ ಭಾರತ ದೇಶ ಅನಾದಿ ಕಾಲದಿಂದಲೂ ನಿಸರ್ಗ ಮತ್ತು ಮನುಷ್ಯನ ಬದುಕಿನ ನಡುವೆ ಸಮತೋಲನ ಸಾಧಿಸಿಕೊಂಡು ಬರುತ್ತಿದ್ದು ನಮ್ಮ ಒಂದೊಂದು ಆಚರಣೆಯಲ್ಲೂ ನಿಸರ್ಗದ ಜೊತೆಗಿನ ಬಾಂಧವ್ಯ ಬೆಸೆದುಕೊಂಡಿದೆ. ಈ ದೃಷ್ಟಿಯಿಂದ ಭಾರತ ದೇಶ ಇಡೀ ಜಗತ್ತಿಗೆ ಮಾದರಿಯಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟರು.

ಲೋಕಸಭೆ ಅಧ್ಯಕ್ಷೆ ಶ್ರೀಮತಿ ಸುಮಿತ್ರಾ ಮಹಾಜನ್ ಅವರು ದೀಪ ಬೆಳಗಿಸುವ ಮೂಲಕ ಸಂಕ್ರಾಂತಿ ಮಿಲನ ಸಮಾರಂಭವನ್ನು ಉದ್ಘಾಟಿಸಿ "ಸಂಕ್ರಾಂತಿ ಹಬ್ಬ ಹೊಸ ವರ್ಷ ಹಾಗೂ ಹೊಸ ಫಸಲು (ಬೆಳೆ)ಗಳನ್ನು ಜೊತೆ ಜೊತೆಯಲ್ಲಿ ಹೊತ್ತು ತರುವಂತಹ ಸಂತೋಷದ ಹಬ್ಬವಾಗಿದ್ದು ನಾವೆಲ್ಲರೂ ಸಿಹಿ ತಿನಿಸು ತಿಂದು ವರ್ಷವೆಲ್ಲ ಎಲ್ಲರಿಗೂ ಸಿಹಿಯನ್ನು ಹಂಚೋಣ ಎಂದು ಶುಭಕೋರಿದರು. ಕಾರ್ಯಕ್ರಮದ ರೂವಾರಿಗಳಾದ ಶ್ರೀ ವೆಂಕಯ್ಯ ನಾಯ್ಡು ಅವರು ಸ್ವಭಾವತಃ ಚುಟುಕು ಹಾಸ್ಯ ಮಿಶ್ರಿತ ಮಾತುಗಳ ಮೂಲಕ ಕಾರ್ಯಕ್ರಮದ ನಿರೂಪಣೆಯನ್ನು ವಿನೂತನ ರೀತಿಯಲ್ಲಿ ನಡೆಸಿಕೊಡುತ್ತಿದ್ದ ಅವರು ಸ್ಪೀಕರ್ ಸುಮಿತ್ರಾ ಮಹಾಜನ್ ಅವರನ್ನು ಕುರಿತು "ಆ ಲೋಕಸಭೆಗಿಂತ ಈ ಲೋಕಲ್ ಸಭೆ ಹೆಚ್ಚು ಶಿಸ್ತಿನಿಂದ ಕೂಡಿದೆ" ಎಂದು ಹೇಳಿ ನೆರೆದಿದ್ದವರು ನಗೆಗಡಲಲ್ಲಿ ತೇಲುವಂತೆ ಮಾಡಿದರು.

ಕಾರ್ಯಕ್ರಮದ ನಡುವೆ ಎಲ್ಲ ಗಣ್ಯರೊಂದಿಗೆ ಉಭಯ ಕುಶಲೋಪರಿ ವಿಚಾರಿಸುತ್ತಿದ್ದ ಅವರು ಅಲ್ಪಸಂಖ್ಯಾತ ಕಲ್ಯಾಣ ಮಂತ್ರಿ ಡಾ. ನಜ್ಮಾ ಹೆಫ್ತುಲ್ಲಾ ಅವರನ್ನು ವೇದಿಕೆಗೆ ಆಹ್ವಾನಿಸುತ್ತಾ "ನಜ್ಮಾ ಅವರ ಬಳಿ ಯಥೇಚ್ಛವಾದ ಆಸ್ತಿ ಇರುವುದರಿಂದ ಅದನ್ನು ನೋಡಿಕೊಳ್ಳುವ ಅವರು ತಮ್ಮನ್ನು ದತ್ತು ತೆಗೆದುಕೊಂಡಿದ್ದಾರೆಂದು ಹೇಳಿದಾಗ, ಡಾ. ನಜ್ಮಾ ಹೆಫ್ತುಲ್ಲಾ ಅವರು ತಮ್ಮ ಭಾಷಣದ ಕೊನೆಯಲ್ಲಿ ಶ್ರೀ ವೆಂಕಯ್ಯ ನಾಯ್ಡು ನನ್ನ ದತ್ತು ಪುತ್ರ" ಎಂಬುದಾಗಿ ಹೇಳಿದರು.

ಎಲ್ಲರಿಗೂ ಸಂಕ್ರಾಂತಿ ಹಬ್ಬದ ಶುಭ ಕೋರಿ ಕೇಂದ್ರ ಗೃಹ ಮಂತ್ರಿ ಶ್ರೀ ರಾಜನಾಥ್ ಸಿಂಗ್ ಅವರು ಶ್ರೀ ವೆಂಕಯ್ಯ ನಾಯ್ಡು ಅವರನ್ನು ಹಿರಿಯ ಸಹೋದರನೆಂದು ಬಣ್ಣಿಸಿದರು. ಕೇಂದ್ರದ ಮಂತ್ರಿಗಳಾದ ಡಾ. ಹರ್ಷ್ ವರ್ಧನ್, ಶ್ರೀ ಜಯಂತ್ ಸಿನ್ಹಾ, ಶ್ರೀ ಮಹೇಶ್ ಶರ್ಮಾ, ಶ್ರೀ ವಿ.ಕೆ. ಸಿಂಗ್, ಶ್ರೀ ತಾವರ್ ಚಂದ್ ಗೆಹ್ಲೋಟ್, ಶ್ರೀ ನರೇಂದ್ರ ಸಿಂಗ್ ತೋಮರ್, ಶ್ರೀ ಮುಕ್ತಾರ್ ಅಬ್ಬಾಸ್ ನಕ್ವಿ, ಹಾಗೂ ಗೋವಾದ ರಾಜ್ಯಪಾಲರಾದ ಶ್ರೀಮತಿ ಮೃದುಲಾ ಸಿನ್ಹಾ, ದೆಹಲಿಯ ಲೆಫ್ಟಿನೆಂಟ್ ಗೌವರ್ನರ್ ಶ್ರೀ ನಜೀಬ್ ಜಂಗ್ ಮತ್ತು ಅನೇಕ ನ್ಯಾಯವಾದಿಗಳು ಪಾಲ್ಗೊಂಡು ಸಭಿಕರೆಲ್ಲರಿಗೂ ಸಂಕ್ರಾಂತಿ ಶುಭ ಕೋರಿದರು. ಅಲ್ಲದೆ ಮತ್ತೊಬ್ಬ ಗಣ್ಯ ಅತಿಥಿಯಾಗಿದ್ದ ಕೇಂದ್ರ ವಿಚಕ್ಷಣ ದಳದ ಮುಖ್ಯಸ್ಥರಾದ ಶ್ರೀ ಕೆ.ವಿ. ಚೌಧರಿ ಅವರ ನೇರ ನಡೆನುಡಿಗಳನ್ನು ಶ್ರೀ ವೆಂಕಯ್ಯ ನಾಯ್ಡು ಅವರು ಮುಕ್ತಕಂಠದಿಂದ ಹೊಗಳಿದರು.

ಸಂಕ್ರಾಂತಿ ಮಿಲನ ಸಮಾರಂಭದಲ್ಲಿ ಭಾರತದ ವಿವಿಧ ಭಾಗಗಳಿಂದ ಆಯ್ಕೆಗೊಂಡ ಜನಪ್ರತಿನಿಧಿಗಳು, ನ್ಯಾಯವಾದಿಗಳು, ಗಣ್ಯರು ಹಾಗೂ ಅಧಿಕ ಸಂಖ್ಯೆಯಲ್ಲಿ ದಕ್ಷಿಣ ಭಾರತೀಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.



### ಕನ್ನಡ ಕುವರಿಯ ಭರತನಾಟ್ಯ:

ಕಾರ್ಯಕ್ರಮದಲ್ಲಿ ನೃತ್ಯ, ಭರತನಾಟ್ಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಸಿದ್ದು ಕವಿ ಚನ್ನವೀರ ಕಣವಿ ಅವರ "ಹಚ್ಚೇವು ಕನ್ನಡದ ದೀಪ" ಕನ್ನಡ ಗೀತೆಗೆ ಕುಮಾರಿ ಪವಿತ್ರ ಮಾಡಿದ ನೃತ್ಯ ಅತ್ಯಂತ ಮನಮೋಹಕವಾಗಿತ್ತು. ಕು. ಪವಿತ್ರ ಅವರು ಶ್ರೀಮತಿ ಲೀಲಾ ಮತ್ತು ಶ್ರೀ ರಾಜೇಶ್ ಅವರ ಪುತ್ರಿ. ಅವರು ಈಗಾಗಲೇ ಕರ್ನಾಟಕದಲ್ಲಿ ಹಾಗೂ ರಾಷ್ಟ್ರಗಳಲ್ಲಿ ಕಾರ್ಯಕ್ರಮ ನೀಡಿ ಹೆಸರು ಪಡೆದಿದ್ದಾರೆ. ಕು. ಪವಿತ್ರ ಅವರ ಕಾರ್ಯಕ್ರಮ ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆಯಿತು. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಮೆಚ್ಚುಗೆ ವ್ಯಕ್ತಪಡಿಸಿ ಆಶೀರ್ವದಿಸಿದರು. ದಕ್ಷಿಣ ಭಾರತದ ಮುಖ್ಯವಾಗಿ ಆಂಧ್ರಪ್ರದೇಶದ ಅನೇಕ ತಿಂಡಿ ತಿನಿಸುಗಳಿಂದ ಕೂಡಿದ್ದ ಉಪಹಾರವನ್ನು ಏರ್ಪಡಿಸಲಾಗಿತ್ತು. ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಶ್ರೀ ವೆಂಕಯ್ಯ ನಾಯ್ಡು ಅವರಿಗೆ ಹೂಗುಚ್ಛ ನೀಡಿ ಅತ್ಯಂತ ಸಂಭ್ರಮದ ಸಂಕ್ರಾಂತಿ ಮಿಲನ ಕಾರ್ಯಕ್ರಮವನ್ನು ಆಯೋಜಿಸಿದುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು

### ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಸನ್ಮಾನ:

ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ನೆಚ್ಚಿನ ಕಾರ್ಯಕ್ರಮವಾದ "ಸ್ವಚ್ಛ ಭಾರತ್ ಅಭಿಯಾನ" ಕುರಿತು ಹಾಡೊಂದನ್ನು ರಚಿಸಿ ಹಾಡಿರುವ ಖ್ಯಾತ ಗಾಯಕರಾದ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತು ಸ್ಪೀಕರ್ ಸುಮಿತ್ರ ಮಹಾಜನ್ ಅವರುಗಳು ಸನ್ಮಾನಿಸಿದರು. ಸನ್ಮಾನಿಸಿ ಮಾತನಾಡಿದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಬಾಲಸುಬ್ರಹ್ಮಣ್ಯಂ ಅವರ ಗಾಯನ ಬದುಕಿನಲ್ಲಿ ಐವತ್ತು ವಸಂತಗಳನ್ನು ಪೂರೈಸಿರುವುದನ್ನು ಹಾಗೂ ಈ ಐದು ದಶಕಗಳಲ್ಲಿ ಅವರು ಸಾಧಿಸಿದ ಸಾಧನೆ ಮತ್ತು ಅಪಾರ ಕೀರ್ತಿಗಳನ್ನು ಮನದುಂಬಿ ಶ್ಲಾಘಿಸಿದರು. ಅಲ್ಲದೆ ಗಾಯನ ಬದುಕಿನಲ್ಲಿ ಇಷ್ಟು ದೀರ್ಘ ಕಾಲ ಯಶಸ್ವಿಯಾಗಿ ಸಾಧನೆಗೈದ ಬಾಲಸುಬ್ರಹ್ಮಣ್ಯಂ ಅವರನ್ನು ಕುರಿತಾಗಿ ವೆಂಕಯ್ಯ ನಾಯ್ಡು ಅವರು ಸವಿವರವಾದ ಮಾಹಿತಿಗಳನ್ನು ಸಭಿಕರಿಗೆ ನೀಡಿದರು.

ಸನ್ಮಾನ ಸ್ವೀಕರಿಸಿದ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಸ್ವಚ್ಛ ಭಾರತ್ ಅಭಿಯಾನ ದ ಬಗ್ಗೆ ರಚಿಸಿರುವ ಹಾಡನ್ನು ಹಾಡಿ ಸಭಿಕರೆಲ್ಲರೂ ತನ್ಮಯಗೊಳ್ಳುವಂತೆ ಮಾಡಿದರು. ಅಲ್ಲದೆ ಈ ಹಾಡನ್ನು ಭಾರತದ ಎಲ್ಲ ಭಾಷೆಗಳಲ್ಲೂ ಹಾಡಿ ದೇಶದ ಎಲ್ಲ ನಾಗರೀಕರಿಗೂ ಸ್ವಚ್ಛಭಾರತ್ ಅಭಿಯಾನದ ಮಹತ್ವ ತಿಳಿಯುವಂತೆ ಮಾಡುವುದಾಗಿ ಹೇಳಿದರು. ಬಹುಭಾಷಾ ವಿಶಾರದರಾದ ಬಾಲಸುಬ್ರಹ್ಮಣ್ಯಂ ಅವರು ಕನ್ನಡ, ತೆಲುಗು, ತಮಿಳು ಹಿಂದಿ, ಸೇರಿದಂತೆ ವಿವಿಧ ಭಾಷೆಗಳಲ್ಲಿ ನೆರೆದಿದ್ದ ಎಲ್ಲರಿಗೂ ಸಂಕ್ರಾಂತಿಯ ಶುಭಾಶಯಗಳನ್ನು ಕೋರಿದರು. ಅ

***ಅಭಿಮತ ವರದಿ***

# ರಾಮಮೋಹನ್ ರಾವ್ ಅವರ ಪುಸ್ತಕ ಬಿಡುಗಡೆ



ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ ನಿವೃತ್ತ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ್ ರಾವ್ ಅವರ ಮಹತ್ವದ ಕೃತಿ 'ಕಾನ್‌ಫ್ಲಿಕ್ಟ್ ಕಮ್ಯೂನಿಕೇಶನ್– ಕ್ರಾನಿಕ್ಲ್‌ಸ್ ಆಫ್ ಎ ಕಮ್ಯೂನಿಕೇಟರ್' ಅನ್ನು ಮಾಜಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಶ್ರೀ ಮನೀಶ್ ತಿವಾರಿ ಅವರು ಇದೇ ಜನವರಿ 9ರಂದು ನವದೆಹಲಿಯ ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ಬಿಡುಗಡೆಗೊಳಿಸಿದರು.

ಭಾರತದ ಗುಪ್ತದಳ ಸಂಸ್ಥೆ ರೀಸರ್ಚ್ ಎಂಡ್ ಅನಾಲಿಸಿಸ್ ವಿಂಗ್‌ನ ಮಾಜೀ ಮುಖ್ಯಸ್ಥ ಶ್ರೀ ವಿಕ್ರಮ ಸೂದ್, ಹಿರಿಯ ಪತ್ರಕರ್ತರಾದ ಕಲ್ಯಾಣಿ ಶಂಕರ್ ಮತ್ತು ಸುಶಾಂತ್ ಸಿಂಗ್ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ನಡೆದ ಸಂವಾದದಲ್ಲಿ ಪಾಲ್ಗೊಂಡಿದ್ದರು. ಸರಕಾರದ ವಾರ್ತಾ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರಿಗಲ್ಲದೇ, ಸಂವಹನ ವಿಷಯದ ವಿದ್ಯಾರ್ಥಿಗಳಿಗೆ ಸ್ಪೂರ್ತಿದಾಯಕವಾಗಿರುವ ಈ ಇಂಗ್ಲೀಷ್ ಕೃತಿಯನ್ನು ಎಎನ್‌ಐ ಮತ್ತು ಪೆಂಟಗಾನ್ ಪ್ರೆಸ್ ಪ್ರಕಟಿಸಿದೆ. ಅ

***ಅಭಿಮತ ವರದಿ***

## ಅಭಿನಂದನೆ



ಫರಿದಾಬಾದ್‌ನಲ್ಲಿ ಸೀಮಾಸ್ ಅಕಾಡೆಮಿ ವತಿಯಿಂದ ಇದೇ ಜನವರಿ 30ರಂದು ನಡೆದ ರಾಷ್ಟ್ರೀಯ ಸೋರಬಾನ್ ಸ್ಪರ್ಧೆಯಲ್ಲಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಜ್ಯೋತಿ ಮತ್ತು ಶ್ರೀ ಒ ಜಗದೀಶ್ ದಂಪತಿಯ ಪುತ್ರ ಮಾ. ಜೆ. ರಿಷಿ, ಚಾಂಪಿಯನ್ ಆಫ್ ದಿ ಚಾಂಪಿಯನ್ ಆಗಿರುತ್ತಾರೆ.
ಇದೇ ವಿಭಾಗದಲ್ಲಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಅಶ್ವಿನಿ ಬಿ.ಎನ್ ಮತ್ತು ಶ್ರೀ ನಾರಾಯಣ ಬಿ ದಂಪತಿಯ ಪುತ್ರ ಮಾ. ಚಿರಂತನ್ ಎನ್. ಗೌಡ ಅವರು ಪ್ರಥಮ ಬಹುಮಾನವನ್ನು ಪಡೆದಿರುತ್ತಾರೆ. ಈ ಇಬ್ಬರೂ ವಿದ್ಯಾರ್ಥಿಗಳು ಆರ್.ಕೆ.ಪುರಂ ಸೆಕ್ಟರ್–12 ರಲ್ಲಿರುವ ಸೀಮಾಸ್ ಅಕಾಡೆಮಿ ವಲಯದ ವಿದ್ಯಾರ್ಥಿಗಳಾಗಿದ್ದು, ಸದರಿ ವಲಯವು ಈ ಸ್ಪರ್ಧೆಯಲ್ಲಿ ರಾಷ್ಟ್ರೀಯ ಆಲ್ ರೌಂಡರ್ ಪ್ರಶಸ್ತಿಯನ್ನೂ ಸಹ ಪಡೆದಿರುತ್ತದೆ. ಅ

***ಎಸ್. ಕುಮಾರ್***

## ಓದುಗರ ಪತ್ರ




ದೆಹಲಿ ಕರ್ನಾಟಕ ಸಂಘದ ಮುಖವಾಣಿ ಅಭಿಮತ ಓದಿದೆ. ಸಂಘವು ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ತಿಳಿದು ಸಂತೋಷವಾಗುತ್ತಿದೆ. ಸಂಘದ ಸಮಿತಿಯ ಸದಸ್ಯರು ತುಂಬ ಆಸಕ್ತಿಯಿಂದ ಮನಸ್ಸನ್ನು ಸಂತೋಷಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಮೆಚ್ಚತಕ್ಕ ಸಂಗತಿ. ಭಾಷೆ–ಸಾಹಿತ್ಯ–ಸಂಗೀತ–ಕಲೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಮಾಹಿತಿ ಈ ಪತ್ರಿಕೆಯ ಮೂಲಕ ದಾಖಲಾಗುತ್ತಿದೆ. ಒಪ್ಪ ಓರಣವಾಗಿ ಪತ್ರಿಕೆಯನ್ನು ಪ್ರಕಟಿಸಿದ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳಿಗೆ ನನ್ನ ಅಭಿನಂದನೆಗಳು.

***ಡಾ.ಎಫ್.ಟಿ. ಹಳ್ಳಿಕೇರಿ***

'ಅಭಿಮತ'ದ ಬೆಳ್ಳಿ ಸಂಪುಟದ ವಿಶೇಷ ಸಂಚಿಕೆ ತುಂಬಾ ಸುಂದರವಾಗಿ ಮೂಡಿಬಂದಿದೆ. ಪ್ರಕಟಣೆಗೊಂಡ ಲೇಖನಗಳು ಪ್ರತಿಯೊಂದೂ ತುಂಬಾ ಚೆನ್ನಾಗಿದೆ. ಇಷ್ಟರತನಕ ಅಭಿಮತದೊಂದಿಗೆ ಕೆಲಸ ಮಾಡಿದ ಪ್ರತಿಯೊಬ್ಬ ಕಾರ್ಯಕಾರಿ ಸಮಿತಿ ಸದಸ್ಯರು, ಸಂಘದ ಕರ್ಮಚಾರಿ, ಸಿಬ್ಬಂದಿವರ್ಗ ಹೀಗೆ ಪ್ರತಿಯೊಬ್ಬರ ವಿಶೇಷ ಸೇವೆಯ ವಿವರಗಳು ತುಂಬಾ ಸುವ್ಯವಸ್ಥಿತ ರೀತಿಯಲ್ಲಿ ವಿಶದಪಡಿಸಲಾಗಿದೆ.
ಭಾವಚಿತ್ರಗಳ ಅಳವಡಿಕೆ ಅರ್ಥಪೂರ್ಣವಾಗಿದೆ. ಶ್ರೀ ಸಿ.ವಿ.ಗೋಪಿನಾಥ್, ಶ್ರೀಮತಿ ಉಷಾ ಭರತಾದ್ರಿ, ಎನ್.ಪಿ. ಭಟ್, ಡಾ. ಪುರುಷೋತ್ತಮ ಬಿಳಿಮಲೆ ಇವರೆಲ್ಲರ ಲೇಖನಗಳು ಅಪೂರ್ವ. ದೆಹಲಿ ಇತಿಹಾಸ, ಪುರಾಣ ಕಾಲದಿಂದ ಭಾರತದ ವರ್ಣನೆಯೊಂದಿಗೆ ಕರ್ನಾಟಕದ ಸಂಘದ ಹುಟ್ಟು, ಬೆಳವಣಿಗೆ, ಏಳುಬೀಳುಗಳು ರಾಜಕೀಯಗಳು ಇತ್ಯಾದಿಗಳ ಇತಿಹಾಸ ಉತ್ತಮವಾಗಿ ಮೂಡಿಬಂದಿದೆ.

ಹಿಂದೊಮ್ಮೆ ಸಂಪಾದಕ ಮಂಡಳಿಯಲ್ಲಿದ್ದ ಈಗಿನ ಅಧ್ಯಕ್ಷರು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಈಗಿನ ಸಂಪಾದಕ ಮಂಡಳಿಯ 'ಬಾನಾಡಿ' ಅವರ ನೇತೃತ್ವದಲ್ಲಿ ಅಭಿಮತ ಇನ್ನೂ ಹೊಸ ಎತ್ತರಕ್ಕೇರಲಿ ಎಂದು ಮನಸ್ಫೂರ್ತಿಯಾಗಿ ಹಾರೈಸುತ್ತೇನೆ.

***ಬಿ.ಎನ್. ಭಟ್,***
***ಸಿಕಂದರಾಬಾದ್***

# ದೆಹಲಿಯಲ್ಲಿ ದಿನಕರ ತಂಡದ ಹೊಸ ಅಲೆಯ ಎರಡು ಯಶಸ್ವೀ ನಾಟಕಗಳು



ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ದಿನಕರ' ತಂಡವು ಚಂದ್ರಕಾಂತ ಕೂಸನೂರ ಅವರ 'ಹಳ್ಳ ಕೊಳ್ಳ ನೀರು' ಮತ್ತು ಡಾ. ಲೋಹಿತ್ ನಾಯ್ಕರ ಅವರ 'ಪಾತ್ರಧಾರಿಣಿ' ನಾಟಕಗಳನ್ನು ಇದೇ ಜನವರಿ 3ರಂದು ದೆಹಲಿ ಕನ್ನಡ ನಾಟಕ ಪ್ರೇಮಿಗಳ ಮುಂದೆ ಯಶಸ್ವಿಯಾಗಿ ಪ್ರದರ್ಶಿಸಿತು. ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ಮೂಡಿ ಬಂದ ಈ ಪ್ರಯೋಗಗಳು ಸ್ಥಳೀಯ ಕಲಾವಿದರನ್ನು ತಾವು ಯಾವುದೇ ವೃತ್ತಿಪರ ಕಲಾವಿದರಿಗೆ ಕಡಿಮೆಯಿಲ್ಲ ಎಂಬಂತೆ ಸಾದರಪಡಿಸಿತು. ಕೂಸನೂರರ ಅಸಂಗತ ನಾಟಕದಲ್ಲಿ 'ಅ', 'ಬ' ಮತ್ತು 'ಕ' ರಾಗಿ ನಟಿಸಿದ ಕುಮಾರ್, ಹರಿಪ್ರಿಯ ಹಾಗೂ ಮಹಾದೇವ ಅವರು ತಮ್ಮ ತಮ್ಮ ಪಾತ್ರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಟಿಸಿ ನೆರೆದಿದ್ದ ಸಭಿಕರನ್ನು ದಿಗ್‌ಭ್ರಮೆಗೊಳಿಸಿದರು. ಮೊದಲ ಬಾರಿಗೆ ಅಭಿನಯಿಸಿದ ಹರಿಪ್ರಿಯ ಅವರ ಅಭಿನಯ, ಆತ್ಮಸ್ಥೈರ್ಯ ಹಾಗೂ ಅವರು ತಮ್ಮ ಡೈಲಾಗ್‌ಗಳನ್ನು ಪ್ರಸ್ತುತಪಡಿಸಿದ ರೀತಿ ಎಲ್ಲರಿಗೂ ಆಶ್ಚರ್ಯ ಮೂಡಿಸಿತು. ನಾಟಕದಲ್ಲಿ ಬಳಸಿದ ರಂಗ ಸಜ್ಜಿಕೆ, ಬೆಳಕು ಮತ್ತು ಸಂಗೀತ ಕೂಡಾ ಬಹಳ ಅರ್ಥಗರ್ಭಿತ ಹಾಗೂ ಸಾಂಕೇತಿಕವಾಗಿದ್ದವು. ಶಶಿಕಾಂತ ಪಾಟೀಲರ ವಸ್ತ್ರಾಲಂಕಾರ ಹಾಗೂ ಪ್ರಸಾದನ ಅಚ್ಚುಕಟ್ಟಾಗಿತ್ತು.

1970ರ ದಶಕದಲ್ಲಿ ಪ್ರಸಿದ್ಧವಾಗಿದ್ದ ಅಸಂಗತ ನಾಟಕ ಪರಂಪರೆಯನ್ನು 2016ರಲ್ಲಿ ಮತ್ತೆ ದೇಶದ ರಾಜಧಾನಿಯಲ್ಲಿ ಇಂಗಳೇಶ್ವರರು ಜೀವಂತಗೊಳಿಸಿದ್ದಾರೆ. ಒಂದು ಪ್ರಭಾವಶಾಲಿ ನಾಟಕವನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಯೋಗಿಸಿ ದಿನಕರ ನೆರೆದಿದ್ದ ನಾಟಕ ಪ್ರೇಮಿಗಳಿಂದ ಸೈ ಅನ್ನಿಸಿಕೊಂಡಿತು.

ಎರಡನೇ ನಾಟಕ ಡಾ. ಲೋಹಿತ್ ನಾಯ್ಕರ ಅವರ ಸಮಕಾಲೀನ ವಸ್ತುಸ್ಥಿತಿಗೆ ಕನ್ನಡಿ ಹಿಡಿಯುವಂತಹ ಒಂದು ನೈಜ ಘಟನೆಯನ್ನು ಆಧರಿಸಿ ರಚಿಸಿದ 'ಪಾತ್ರಧಾರಿಣಿ' ನಾಟಕವನ್ನು ದಿಲೀಪ್ ಬಾಪಟ್ ಹಾಗೂ ಸವಿತಾ ನೆಲ್ಲಿಯವರ ಜೋಡಿ ಬಹಳ ಸಹಜವಾಗಿ ರಂಗದ ಮೇಲೆ ಬಿಚ್ಚಿಟ್ಟಿತು. ಪೋಲಿಸು ಇನ್ಸ್‌ಪೆಕ್ಟರ್ ಆಗಿ ಅತ್ಯಂತ ಸ್ವಾಭಾವಿಕ ಅಭಿನಯ ಪ್ರದರ್ಶಿಸಿದ ದಿಲೀಪ್ ಅವರು ತಾವೊಬ್ಬ ಉತ್ತಮ ನಟರೆಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು.

ಸವಿತಾ ನೆಲ್ಲಿ ತನ್ನ ವಿವಿಧ ಪಾತ್ರಗಳಲ್ಲಿ ಅತ್ಯಂತ ಸರಳ ಹಾಗೂ ಸ್ವಾಭಾವಿಕ ನಟನೆಯಿಂದ ತಮ್ಮಲ್ಲಿ ಅಡಗಿದ್ದ ಪ್ರತಿಭೆಯನ್ನು ಪ್ರಭಾವಶಾಲಿ ಅಭಿನಯ, ಸ್ವರದ ಏರಿಳಿತ ಹಾಗೂ ಭಾವನೆಗಳು ಮತ್ತು ಹಾವ, ಭಾವ, ಭಂಗಿಗಳಿಂದ ಸಭಿಕರನ್ನು ಹಿಡಿದಿಟ್ಟರು. ಪೋಲಿಸ್ ಲಾಕ ಅಪ್ ಹಾಗೂ ಸಣ್ಣ ಠಾಣೆಯಲ್ಲಿ ನಡೆಯುವ ಈ ನಾಟಕವು ನಮ್ಮ ಕಣ್ಣ ಮುಂದೆ ಅದೀಗ ನಿಜವಾಗಿ ನಡೆಯುತ್ತಿರುವ ಒಂದು ನೈಜ ಘಟನೆಯಂತೆ ಪ್ರಭಾವಶಾಲಿಯಾಗಿ ಮೂಡಿಬಂತು.

ಇಂಗಳೇಶ್ವರ ಅವರ ನುರಿತ-ಪ್ರಬುದ್ಧ ನಿರ್ದೇಶನ, ಪಾಟೀಲರ ಉಡುಗೆ-ತೊಡುಗೆ ಹಾಗೂ ಮೇಕಪ್, ಬೆಳಕು ಹಾಗೂ ರಂಗಸಜ್ಜಿಕೆ, (ಶಿವಪ್ಪ ಹಾಗೂ ಕೃಷ್ಣರಾಜ) ನಾಟಕದ ಯಶಸ್ಸಿಗೆ ಪೂರಕವಾಗಿ ಸಹಕರಿಸಿದವು. ದಿನಕರ ವರ್ಷದ ಆರಂಭದಲ್ಲೇ ಉತ್ತಮವಾದ ಎರಡು ವಿಭಿನ್ನ ನಾಟಕ ಪ್ರದರ್ಶನಗಳನ್ನು ನೀಡಿ ತನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ. ನಿರ್ದೇಶನ ಹಾಗೂ ನಾಟಕದ ಆಯ್ಕೆಯಲ್ಲಿ ದಿನಕರ ಬಹಳ ಪ್ರಬುದ್ಧತೆಯನ್ನು ಸಾಧಿಸಿದೆ. ಎರಡೂ ನಾಟಕಗಳಲ್ಲೂ ಕಾಣಿಸಿಕೊಂಡಂತಹ ಒಂದು ಕೊರತೆಯೆಂದರೆ ಉತ್ತಮ ಹಿನ್ನಲೆ ಸಂಗೀತದ್ದು. ಅ

***ಸಖಾರಾಮ ಉಪ್ಪೂರು***

---

# ನನ್ನ ಅನುಭವ

ಮಾನವನ ಜೀವನ ನಿಂತ ನೀರಾಗಿರದೆ ಹರಿಯುವ ನದಿಯಾಗಿರಬೇಕು. ಪ್ರತಿಯೊಂದು ಹಂತದಲ್ಲೂ ಹೊಸತೇನಾದರೂ ಕಲಿಯಬೇಕು, ಕಲಿಯುವ ಇಚ್ಛೆ ಇರಬೇಕು ಎಂಬುದು ನನ್ನ ಅನಿಸಿಕೆ. ಈ ನನ್ನ ಇಚ್ಛೆಗೆ ದಾರಿದೀಪವಾಗಿ ಬಂದಿದ್ದು ಕರ್ನಾಟಕ ಸಂಘದ ವೇದಿಕೆ. ಎರಡು ವರ್ಷದಿಂದ ಇದೇ ವೇದಿಕೆಯಲ್ಲಿ ಬೇರೆ ಬೇರೆ ತರದ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಪ್ರತಿಯೊಂದು ಬಾರಿಯೂ ಉಲ್ಲಾಸದಲ್ಲಿ ಪಾಲ್ಗೊಂಡು ಸಂತೋಷಿಸಿದ್ದೇನೆ. ದಿನಕರ ತಂಡದಿಂದ ಇದೇ ಜನವರಿ 3ರಂದು ಪ್ರದರ್ಶಿಸಿದ 'ಪಾತ್ರಧಾರಿಣಿ' ನಾಟಕದಲ್ಲಿನ ನನ್ನ ಪಾತ್ರ ಸಂಪೂರ್ಣ ಭಿನ್ನವಾಗಿದ್ದು ರೋಮಾಂಚನಕಾರಿಯಾಗಿತ್ತು. ಕಥಾನಕವನ್ನು ಓದಿದ ದಿನದಿಂದ ಈ ನಾಟಕದ ಬಗೆಗಿನ ಕುತೂಹಲ ಹೆಚ್ಚಾಗುತ್ತಿತ್ತು.

ಪ್ರೇಕ್ಷಕರ ಎದುರು ನಡೆಯುವ ನಾಟಕ ಕೆಲವೇ ಗಂಟೆಗಳದ್ದು. ಆಗಿದ್ದರೂ, ಪ್ರದರ್ಶನದ ಪೂರ್ವ ತಯಾರಿಯಲ್ಲಿ ತಗಲುವ ಸಮಯ ಹಲವು ದಿನಗಳದ್ದು. ದೆಹಲಿಯ ಈ ಕೊರೆಯುವ ಚಳಿಯಲ್ಲಿ ದಿನದ ತಾಲೀಮಿಗೆ ಹೇಗೆ ಹೋಗುವೆ ಎಂಬ ಸಂಶಯ ಮೂಡಿತ್ತು. ಮಕ್ಕಳು ಶಾಲೆಯಿಂದ ಬಂದ ನಂತರ ಮಕ್ಕಳ ಶಾಲಾ ಕಾರ್ಯ ಮುಗಿಸಿ ತಾಲೀಮಿಗೆ ಹೋಗುತ್ತಿದ್ದೆ. ಕೆಲವು ಸಲ ಮಕ್ಕಳ ಶಾಲಾ ಪುಸ್ತಕಗಳನ್ನು ಸಂಘಕ್ಕೆ ಒಯ್ದದ್ದು ಇದೆ. ಒಂದು ಸಲವೂ ಸಮಯಕ್ಕೆ ಸರಿಯಾಗಿ ತಾಲೀಮಿಗೆ ಹೋಗಲು ನನ್ನಿಂದಾಗಿರಲಿಲ್ಲ, ಎಂಬುದು ಬೇರೆ ಮಾತು.

ಹಲವು ಬಾರಿ ತಿದ್ದಿದ್ದ ತಪ್ಪುಗಳನ್ನೇ ತಾಳ್ಮೆಯಿಂದ ನಿರ್ದೇಶಕರು ಹೇಳಿಕೊಟ್ಟಿದ್ದೂ ಇದೆ. ನನ್ನಿಂದ ಈ ಪಾತ್ರ ಮಾಡೋಕೆ ಆಗುತ್ತಾ, ಅನ್ನೋದು ನನಗೆ ದೊಡ್ಡ ಪ್ರಶ್ನೆಯಾಗಿತ್ತು.

ಹೆಚ್ಚಿನ ಸಂಭಾಷಣೆಗಳು ನಮ್ಮ ತಾಲೀಮು ನೋಡಿ ನೋಡಿಯೇ ನನ್ನ ಮಗನಿಗೆ ಕಂಠಸ್ಥವಾಗಿದ್ದವು. ಮನೆಯಲ್ಲಿ ಗೃಹ ಕಾರ್ಯಗಳನ್ನು ಮಾಡುವಾಗಲೂ ನನ್ನ ಸಂಭಾಷಣೆಗಳನ್ನು ಮೆಲುಕು ಹಾಕುತ್ತಿದ್ದೆ. ಅಡಿಗೆ ಮನೆಯಲ್ಲಿ ಸೌಟು, ಲಟ್ಟಣಿಗೆ ಹಿಡಿದುಕೊಂಡು 'ಪಾತ್ರಧಾರಿಣಿ'ಯ ಪಾತ್ರದ ನಟನೆ ಅಭ್ಯಾಸಿಸುತ್ತಿದ್ದ ಸಮಯ ಬಲು ಮೋಜಿನದ್ದು.

ಇದೆಲ್ಲದರ ಮಧ್ಯೆ ವಿನೋದ ಅವರ ದೆಹಲಿಯಿಂದ ವರ್ಗಾವಣೆ ನೋವು ತಂದಿತ್ತು. ಎಂತಹ ಪರಿಸ್ಥಿತಿ ಒದಗಿ ಬಂದಾಗ ಮೊದಲು ನೆರವಿಗೆ ಬರುತ್ತಿದ್ದರು. ವಿನೋದ ಅವರದು ಯಾವಾಗಲೂ ನೆನಪಿಸಿಕೊಳ್ಳುವಂತಹ ವ್ಯಕ್ತಿತ್ವ.

ರಂಗಮಂಚದ ಸಾಮಾಗ್ರಿಗಳು ಸುಂದರವಾಗಿದ್ದು ನಟನೆಗೆ ಪ್ರೇರಣೆ ಕೊಡುವಂತದಾಗಿತ್ತು. ಇಡೀ ನಾಟಕದ ಪ್ರಕ್ರಿಯೆಯಲ್ಲಿ ನೆರವು ನೀಡಿದ ದಿಲೀಪ್ ಬಾಪಟ್ ಅವರಿಗೆ ವಿಶೇಷವಾದ ಧನ್ಯವಾದಗಳು.

'ಪಾತ್ರಧಾರಿಣಿ'ಯಲ್ಲಿನ ಎರಡೂ ಪಾತ್ರಗಳು ತುಂಬಾ ಪ್ರಭಾವಶಾಲಿಯಾಗಿವೆ. ವರ್ಗ ವರ್ಗಗಳ ನಡುವೆ, ಬಡವರ-ಸಿರಿವಂತರ ನಡುವೆ, ಕೂಲಿಕಾರ-ಭೂ ಒಡೆಯರ ನಡುವೆ ನಡೆಯುವ ಸಂಘರ್ಷಗಳು, ವರ್ಣ-ಜಾತಿಯೆಂಬ ಸಂಕೋಲೆಯಿಂದ ಶೋಷಿತಗೊಂಡಿರುವ ಪಂಗಡಗಳು ಹೀಗೆ ಸಮಾಜದಲ್ಲಿ ನಡೆಯುವ ಅನ್ಯಾಯಗಳಿಂದ ಆಗುವ ಮಾನಸಿಕ ತೊಳಲಾಟವನ್ನು ಲೇಖಕರು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಪ್ರತಿಯೊಂದು ಸಂಭಾಷಣೆಯೂ ಅರ್ಥಪೂರ್ಣವಾಗಿದೆ. ನನ್ನ ಸಹಪಾತ್ರಧಾರಿಯಾಗಿ ದಿಲೀಪ್ ಬಾಪಟ್ ಅವರ ಅಭಿನಯ ಶ್ಲಾಘನೀಯವಾಗಿದ್ದು, ಪಾತ್ರಕ್ಕೆ ಜೀವ ತುಂಬಿದ ಹಾಗಿತ್ತು.

ಡಾ. ಲೋಹಿತ್ ನಾಯ್ಕರ, ಧಾರವಾಡ ಅವರ ಪದಕುಂಚಗಳಿಂದ ರೂಪುಗೊಂಡ ಕಥಾನಕವಿದು. ಇಂತಹ ಅದ್ಭುತವಾದ ನಾಟಕಕ್ಕೆ ನನ್ನನ್ನು ಆಯ್ಕೆ ಮಾಡಿಕೊಂಡ ನಿರ್ದೇಶಕ ಶಿವಾನಂದ ಇಂಗಳೇಶ್ವರ. ಸುಂದರವಾದ ಮೂರ್ತಿ ರೂಪುಗೊಳ್ಳಲು ಶ್ರೇಷ್ಠ ಶಿಲ್ಪಿಯ ಅವಶ್ಯಕತೆ ಇದ್ದಹಾಗೆ, ಈ ನಾಟಕದ ಯಶಸ್ಸಿಗೆ ನಮ್ಮ ನಿರ್ದೇಶಕ ಗುರುಗಳೇ ಕಾರಣ. ಅ

***ಸವಿತಾ ನೆಲ್ಲಿ***



## ಅರಿವು

ಗತಬಾಳ ಚಿತ್ತ ಬಿಚ್ಚಿತು ಸುರಳಿ
ತಿಳಿಯದ ಮಂಜು ಪ್ರಜ್ಞೆಯ ನುಸುಳಿ
ಗ್ರೀಷ್ಮವಾದ ಬಾಳ ಉದ್ಯಾನದಾ ಅರಿವಾಗಿ
ಅಂತಿಮ ನಿಲ್ದಾಣವಿದು ಇಂದು
ಭೂತ ಭವಿಷ್ಯಗಳ ಸಂಗಮ ಬಿಂದು ಎಂದು ।

ಗ್ರೀಷ್ಮಗಳು ಬಾಳ ಸತ್ಯಗಳೇ
ಭೂತ ಸ್ಮರಿಸಿ ಫಲವಿಲ್ಲ
ವರ್ತಮಾನಕೆ ಮುಗಿಯುವುದಿಲ್ಲ
ಭವಿಷ್ಯದ ಅಂಚು ಕಾಣಸಿಗದ ಅಂಚು
ಬಲ್ಲರು ಯಾರು ವಿಧಿಯ ಸಂಚು

ಹಳೆಯ ಬಂಧನ ಕಳಚಿ ಬಾಳಿನರ್ಥ ಹುಡುಕಿದಾಗ
ವೃಕ್ಷ ಎಷ್ಟು ಎತ್ತರವಾದರೇನು
ಭೂತಾಯಿಯ ಆಶ್ರಯವಿರದೇ?
ವರ್ತಮಾನದ ನಿದ್ರ ವಿಶಾಲ ವೃಕ್ಷದಡಿ
ಕಾಲದ ಮೂಲ ನಿರ್ಲಕ್ಷಿಸದಿರು
ಎಂದು ಅರಿವಾಯಿತೆನಗೆ-ಅರಿವಾಯಿತು

*ಡಾ. ಅಹಲ್ಯಾ ಚಿಂತಾಮಣಿ*

## ಮುನಿಸು

ಗುಡುಗುವ ಬಾನಿಗೆ
ವಿರಾಜಿಸುವ ಮೇಘಕೆ
ಭೋರ್ಗರೆಯುವ ಸಾಗರಕೆ
ಕಂಪಿಸಿ, ಬಿರಿಯುವ ಭೂವಿಗೆ
ತುತ್ತಾಗಿವೆ ಎಷ್ಟೋ ಜೀವಗಳು
ಪ್ರಕೃತಿಯ ಮುನಿಸಿಗೆ
ಕಾರಣ ಬಲ್ಲೆವು
ಮಾಡಿದೆವಪಚಾರವ
ಪ್ರಕೃತಿಯ ಮಾತೆಗೆ
ತಡೆಯುವಳೆಷ್ಟು ದಿನ
ಕೋಪವ ಹೊರಗೆಡೆದಿಹಳು
ಜಲ ಪ್ರಳಯ, ಭೂಕಂಪದ ರೂಪದಲಿ

*ಸು.ಚ. ಹೇಮಲತ*

## ಓ ಗೆಳೆಯರೇ

ಓ ಗೆಳೆಯರೇ, ನಮ್ಮ ಈ ಗೆಳೆತನ...।
ಆಗಲೀ...ಮಾದರಿ...
ಜಗಕೆ ನೀಡಲಿ ಹೊಸತನ..ಟಟ

ನಿಮ್ಮ ನಗುವಿನಲಿ,
ನಿಮ್ಮ ಗೆಲುವಿನಲಿ
ಕಂಡೆ ಹರುಷವಾ,

ನಿಮ್ಮ ನೆನಪುಗಳ
ಸುರಿಮಳೆಯಲ್ಲಿ
ಕಳೆದೆ ವರುಷವಾ,

ಪ್ರತಿದಿನ ನಿಮ್ಮದೇ
ಪ್ರತಿಕ್ಷಣ ನಿಮ್ಮದೇ
ನಿಮದೇ ಈ ಜೀವನ...॥1 ॥

ಓ ಗೆಳೆಯರೇ, ನಮ್ಮ ಈ ಗೆಳೆತನ..।
ಆಗಲೀ...ಮಾದರಿ...
ಜಗಕೆ ನೀಡಲಿ ಹೊಸತನ...

ಶ್ರೀನಿವಾಸ, ಶ್ರೀಧರ
ಪದ್ಮಜ ಶೈಲಜಾ
ಎಲ್ಲ ಗೆಳೆಯರೆ,

ಅರುಣ, ಬಸವ, ಸಂಜಯ
ಜ್ಯೋತಿ, ಜಯಾ, ವಿಜಯ
ಎಲ್ಲ ಗೆಳೆಯರೆ,

ಎಲ್ಲೇ ಇದ್ದರೂ
ಏನೇ ಆಗಿದ್ದರೂ
ಮೊದಲು ಮಿತ್ರರು...॥ 2 ॥

ಓ ಗೆಳೆಯರೇ, ನಮ್ಮ ಈ ಗೆಳೆತನ..।
ಆಗಲೀ...ಮಾದರಿ...
ಜಗಕೆ ನೀಡಲಿ ಹೊಸತನ...

ಆಟ ಪಾಠ
ಕಲಿಸಿದ ದರ್ಬಾರ
ವಿದ್ಯಾಮಂದಿರ,

ಅಹಂಕಾರವಿಲ್ಲದ,
ಸಮಾಜ ಸೇವೆಗೆ
ಸ್ಪೂರ್ತಿ ಸಹಕಾರ

ಸಿದ್ದೇಶ್ವರ, ಬಸವರ
ಶರಣರ ಪುಣ್ಯ ಕ್ಷೇತ್ರ
ವಿಜಯಪುರದ ಸೇವೆಗೆ...॥ 3 ॥

*ಡಾ. ರಂಗನಾಥ. ಮುತ್ತಣ್ಣ. ಸಿಂಗಾರಿ*

# ಶ್ರದ್ಧಾಂಜಲಿ

ಕರ್ನಾಟಕ ಸರ್ಕಾರದ ಮಾಜಿ ಸಚಿವರಾಗಿದ್ದ ಶ್ರೀ ಗೋವಿಂದೇ ಗೌಡರು ಗಾಂಧೀವಾದಿ, ಶಿಕ್ಷಣ ಪ್ರೇಮಿ, ಪ್ರಮಾಣಿಕರು ಮತ್ತು ಎಲ್ಲರಿಗೂ ಸ್ನೇಹಿತರಾಗಿ ಇದ್ದವರು. ಕರ್ನಾಟಕದ ಎಲ್ಲಾ ಜನತೆಗೆ ಒಳ್ಳೆಯದನ್ನು ಬಯಸುವವರು ನಮ್ಮನ್ನು ಅಗಲಿದ್ದಾರೆ. ಇವರ ನಿಧನದಿಂದ ಕರ್ನಾಟಕಕ್ಕೆ ಮತ್ತು ಅವರ ಆತ್ಮೀಯ ಎಲ್ಲ ಸ್ನೇಹಿತರಿಗೆ ಅತೀವ ದುಃಖವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಕೋರುವ



ಗೋವಿಂದೇ ಗೌಡರು
ಮಾಜಿ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

ಮಲ್ಲಾರಿ ಗೌಡ ಪಾಟೀಲ
ಮಾಜಿ ನೀರಾವರಿ ಖಾತೆ ಸಚಿವರು, ಕರ್ನಾಟಕ ಸರ್ಕಾರ
ಚೇರ್ಮನ್, ಆದ್ಯ ಶ್ರೀ ನಿಜಲಿಂಗೇಶ್ವರ ಶಿಕ್ಷಣ ಸಂಸ್ಥೆ
ಸಂಕೇಶ್ವರ, ಬೆಳಗಾಂ ಜಿಲ್ಲೆ, ಕರ್ನಾಟಕ


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Feb-2016, Vol. No.26, Issue No.5, Price Rs.1/- RNI Regn. No. 53405/91, DL-SW-1/4016/16-18
Printout Date : Feb 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ಆಹಾರ ಮೇಳ




ಮಾರ್ಚ್ 20, 2016ರಂದು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿತಿನಿಸುಗಳ ಮೇಳವನ್ನು ಆಯೋಜಿಸಲು ನಿರ್ಧರಿಸಿದೆ.

- ಪ್ರದರ್ಶನದಲ್ಲಿ ಭಾಗವಹಿಸುವವರು ದೆಹಲಿಯ ಸ್ಥಳೀಯ ಕನ್ನಡಿಗರಾಗಿರಬೇಕು
- ಕನಿಷ್ಟಪಕ್ಷ 50ಜನರಿಗೆ ಆಗುವಷ್ಟು ಆಹಾರ ಪದಾರ್ಥಗಳ ವ್ಯವಸ್ಥೆ ಮಾಡಬೇಕು.
- ಶುಚಿ-ರುಚಿಯಾದ ತಿಂಡಿತಿನಿಸು ಮಾಡಿದವರಿಗೆ ಸೂಕ್ತ ಬಹುಮಾನವನ್ನು ನೀಡಲಾಗುವುದು.

ಈ ಮೇಳದಲ್ಲಿ ಭಾಗವಹಿಸಿ ತಿಂಡಿ ತಿನಿಸುಗಳನ್ನು ಪ್ರದರ್ಶಿಸಲಿಚ್ಛಿಸುವವರು ಸ್ಟಾಲ್‌ಗಾಗಿ ದಿನಾಂಕ 05.03.2016ರ ಒಳಗಾಗಿ ತಮ್ಮ ಹೆಸರುಗಳನ್ನು ಸಂಘದ ಕಚೇರಿಯಲ್ಲಿ ನೋಂದಾಯಿಸಬೇಕಾಗಿ ವಿನಂತಿ. ಒಟ್ಟು 40 ಸ್ಟಾಲ್‌ಗಳಿಗೆ (ಸಸ್ಯಾಹಾರ ಹಾಗೂ ಮಾಂಸಹಾರ ತಿಂಡಿತಿನಿಸುಗಳ) ಅವಕಾಶವಿದೆ. ಮೊದಲು ಬಂದವರಿಗೆ ಮೊದಲ ಆಧ್ಯತೆ. ಪ್ರದರ್ಶನ ಸಮಯ ಬೆಳಿಗ್ಗೆ 11.00ರಿಂದ ಸಂಜೆ 6.00ರವರೆಗೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ- 9811325440, ಶ್ರೀ ರಾಧಾಕೃಷ್ಣ, ಅಧ್ಯಕ್ಷರು, ಆಹಾರ ಮೇಳ-9818252183 ಶ್ರೀಮತಿ ಜಮುನಾ ಮಠದ, ಸಂಚಾಲಕರು, ಆಹಾರ ಮೇಳ-9717146597 ಸಂಘದ ಕಚೇರಿ-26109615 / 26104818